ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

**BENGALURU
CITY UNIVERSITY**

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrar@bcu.ac.in

ಸಂಖ್ಯೆ:ಬಿಸಿಯು/ಎಸ್‌ವೈಎನ್–21/ಸಾಮಾನ್ಯ ಸಭೆ/456/2022–23 ದಿನಾಂಕ: 18.03.2023.

ಗೆ,
ಮಾನ್ಯ ಸಿಂಡಿಕೇಟ್ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು–560001

ಮಾನ್ಯರೆ,

ವಿಷಯ: ದಿನಾಂಕ: 15.03.2023 ರಂದು ಜರುಗಿದ ಸಿಂಡಿಕೇಟ್ 21ನೇ ಸಾಮಾನ್ಯ ಸಭೆಯ ನಡವಳಿಗಳು.

****

ದಿನಾಂಕ: 15.03.2023 ರಂದು ಪೂರ್ವಾಹ್ನ 11.00 ಗಂಟೆಗೆ ಜರುಗಿದ ಸಿಂಡಿಕೇಟ್ 21ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ನಡವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ, ಬೆಂ.ನ.ವಿ.

ಬೆಂಗಳೂರು ನಗರ ವಿಶ್ವವಿದ್ಯಾನಿಲಯ

BENGALURU CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
Ph.No.080-22131385, E-mail: registrarbcu@gmail.com

ಸಂಖ್ಯೆ:ಬಿಸಿಯು/ಎಸ್‌ವೈಎನ್–21/ಸಾಮಾನ್ಯ ಸಭೆ/456/2022–23 ದಿನಾಂಕ: 18.03.2023.

ದಿನಾಂಕ 15.03.2023 ರಂದು ಪೂರ್ವಾಹ್ನ 11.00 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು 560 001 ಇಲ್ಲಿ ಜರುಗಿದ ಸಿಂಡಿಕೇಟ್ 21 ನೇ ಸಾಮಾನ್ಯ ಸಭೆಯ ನಡವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಲಿಂಗರಾಜ ಗಾಂಧಿ<br>ಕುಲಪತಿಗಳು, | ಸಭಾಧ್ಯಕ್ಷರು |
| 2. | ಶ್ರೀ ಎಂ. ವಿ. ರಂಗಪ್ಪ | ಸದಸ್ಯರು |
| 3. | ಶ್ರೀ. ಸಮರ್ಥ ಮುನಿರಾಜು | ಸದಸ್ಯರು |
| 4. | ಪ್ರೊ. ಕೆ. ಎಂ.ಮಹೇಶ್ | ಸದಸ್ಯರು |
| 5. | ಶ್ರೀ ಸತೀಶ್ ಎಂ | ಸದಸ್ಯರು |
| 6. | ಡಾ. ಮೊಹಮ್ಮದ್ ಸುಹೇಲ್ ಇಕ್ಬಾಲ್ | ಸದಸ್ಯರು |
| 7. | ಡಾ. ಎಸ್. ಹರಿಪ್ರಸಾದ್ | ಸದಸ್ಯರು |
| 8. | ಡಾ. ವಿ. ಲೋಕೇಶ್<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 9. | ಶ್ರೀ ಸಿ ಎನ್ ಶ್ರೀಧರ, ಕೆ.ಎ.ಎಸ್<br>ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಸಭೆಯ ಪ್ರಾರಂಭದಲ್ಲಿ, ಕುಲಸಚಿವರು, ಸಭಾಧ್ಯಕ್ಷರನ್ನು ಹಾಗೂ ಉಪಸ್ಥಿತರಿದ್ದ ಸದಸ್ಯರನ್ನು ಸಭೆಗೆ ಸ್ವಾಗತಿಸಿ, ಸಭೆಗೆ ಚಾಲನೆ ನೀಡಲು ಮಾನ್ಯ ಕುಲಪತಿಗಳನ್ನು ವಿನಂತಿಸಿದರು.

ನಂತರ ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಎಲ್ಲ ಸದಸ್ಯರನ್ನು ಮತ್ತೊಮ್ಮೆ ಸ್ವಾಗತಿಸಿ, ವಿಶ್ವವಿದ್ಯಾಲಯದಲ್ಲಿ ಜರುಗಿದ ವಿವಿಧ ಚಟುವಟಿಕೆಗಳ ಕುರಿತು ಕೆಳಕಂಡ ವರದಿಯನ್ನು ಮಂಡಿಸಿದರು.

1. ದಿನಾಂಕ: 14.02.2023 ರಂದು ಕರ್ನಾಟಕ ಉನ್ನತ ಶಿಕ್ಷಣ ಪರಿಷತ್ತಿನ ಆಶ್ರಯದಲ್ಲಿ ಬ್ರಿಟನ್ ಸರ್ಕಾರ ಬ್ರಿಟಿಷ್ ಕೌನ್ಸಿಲ್ ಆಫ್ ಇಂಡಿಯಾ ಹಾಗೂ ಬೆಂಗಳೂರು ನಗರ ವಿಶ್ವವಿದ್ಯಾಲಯ ಒಳಗೊಂಡಂತೆ ರಾಜ್ಯದಿಂದ ಆಯ್ಕೆಯಾದ 3 ವಿಶ್ವವಿದ್ಯಾಲಯಗಳ ಕುಲಪತಿಗಳು ಮತ್ತು ಸಂಶೋಧನಾ ಯೋಜನೆಯ ಮುಖ್ಯಸ್ಥರು Principal Investigator ಗಳಿಗೆ ಕಾರ್ಯಾಗಾರವನ್ನು ಜರುಗಿಸಲಾಯಿತು. ಸದರಿ

ಕಾರ್ಯಾಗಾರದಲ್ಲಿ ಯೋಜನೆಯ ನಿರ್ವಹಣೆ ಹಾಗೂ ಮುಂದುವರೆಸುವ ಕ್ರಮ ವಿಧಾನಗಳ ಕುರಿತು ಚರ್ಚಿಸಲಾಯಿತು. ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಹಾಗೂ ಬ್ರಿಟನ್ ದೇಶದ ಬರ್ಮಿಂಗ್ ಹ್ಯಾಮ್ ವಿಶ್ವವಿದ್ಯಾಲಯದೊಂದಿಗೆ NET-CARBON-ZERO-HUB ಕುರಿತಂತೆ ಸಂಶೋಧನಾ ಯೋಜನೆ ಮಂಜೂರಾಗಿದ್ದು ಇದಕ್ಕಾಗಿ ಆಯ್ದು ಕೈಗಾರಿಕೆ / ಉದ್ಯಮಗಳನ್ನು ಒಳಗೊಂಡಂತೆ " Business Incubation Centre" ಯೋಜನೆ ಜನವರಿ 2023 ರಿಂದ ಆರಂಭವಾಗಿ 31. ಡಿಸೆಂಬರ್‌ನಲ್ಲಿ ಮುಕ್ತಾಯವಾಗುತ್ತದೆ ಈ ಸಂಬಂಧ GBP 30,000/- ಗಳ ಅನುದಾನ ಮಂಜೂರುವಾಗಿದ್ದು ಎರಡು ವಿಶ್ವವಿದ್ಯಾಲಯಗಳ ಕಾರ್ಯಯೋಜನೆ ಬಗ್ಗೆ ಕಾರ್ಯಗಾರದಲ್ಲಿ ಚರ್ಚಿಸಲಾಯಿತು.

2. ದಿನಾಂಕ 15.02.2023ರಂದು ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ರಾಜ್ಯ ಸರ್ಕಾರದ UUCMS ನಿರ್ವಹಣಾ ಸಂಸ್ಥೆ ಮತ್ತು ನಗರದ ಶೇಷಾದ್ರಿಪುರಂ ಮಹಾವಿದ್ಯಾಲಯಗಳ ಸಹಭಾಗಿತ್ವದಲ್ಲಿ **"Implementation of Unified University & College Management Sytem (UUCMS), National Academic Depository (NAD) & Academic Bank of Credits (ABC) for Principal's First Grade Colleges"** ಕುರಿತಾದ ಒಂದು ದಿವಸದ ಕಾರ್ಯಾಗಾರವನ್ನು ಕುಲಪತಿಗಳಾದ ಪ್ರೊ. ಲಿಂಗರಾಜ ಗಾಂಧಿ ಅವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿತ್ತು. ಈ ಕಾರ್ಯಾಗಾರದಲ್ಲಿ UUCMS, NAD, ಮತ್ತು ABC ಗಳಿಗೆ ಸಂಬಂಧಿಸಿದಂತೆ ಅಗತ್ಯ ಮಾಹಿತಿಗಳನ್ನು ಮಹಾವಿದ್ಯಾಲಯದ ಪ್ರಾಂಶುಪಾಲರೊಂದಿಗೆ ಹಂಚಿಕೊಳ್ಳಲಾಯಿತು. ಮಹಾವಿದ್ಯಾಲಯಗಳಿಗೆ ಹೆಚ್ಚಿನ ಮಾಹಿತಿ ಹಾಗೂ ಅನೇಕ ಸಂದೇಹಗಳಿಗೆ ಪರಿಹಾರ ನೀಡಲಾಯಿತು.

3. ದಿನಾಂಕ 23.03.2023ರಂದು ಕೆನರಾ ಬ್ಯಾಂಕ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ (CBCMS) ಹಾಗೂ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಆಫ್ ಇಂಡಿಯಾ (CAG) ಸಂಸ್ಥೆಯ ಸಹಯೋಗದೊಂದಿಗೆ **"Comemporary Issues on Elementary Education System in Karnataka"** ವಿಷಯದ ಮೇಲೆ ಒಂದು ದಿವಸ ಸಮ್ಮೇಳನವನ್ನು ಕುಲಪತಿಗಳಾದ ಪ್ರೊ. ಲಿಂಗರಾಜ ಗಾಂಧಿ ಉದ್ಘಾಟಿಸಿದರು. ಈ ಸಮ್ಮೇಳನದಲ್ಲಿ ಸಮಗ್ರ ಶಿಕ್ಷಣ ಯೋಜನೆಯ ರಾಜ್ಯ ಯೋಜನಾ ನಿರ್ದೇಶಕರಾದ ಶ್ರೀಮತಿ ಬಿ.ಬಿ ಕಾವೇರಿ IAS ಶ್ರೀಮತಿ ಮೋನಾಲಿ ಘಡಶರೆ, ಡೆಪ್ಯೂಟಿ ಅಕೌಂಟೆಂಟ್ ಜನರಲ್, ಭಾಗವಹಿಸಿ ಉಪಯುಕ್ತ ಮಾಹಿತಿ ನೀಡಿದರು.

4. ದಿನಾಂಕ 23.02.2023ರಂದು ಕರ್ನಾಟಕ ಅಸೋಸಿಯೇಷನ್ ಫಾರ್ ದ ಅಡ್ವಾನ್ಸ್‌ಮೆಂಟ್ ಆಫ್ ಸೈನ್ಸ್ (KAAS) ಮತ್ತು ವಿಶ್ವವಿದ್ಯಾಲಯದ ಭೌತಶಾಸ್ತ್ರ ವಿಭಾಗಗಳ ಸಹಭಾಗಿತ್ವದಲ್ಲಿ **"Deformation mechanisms in Niti Shape Memory Alloys"** ಕುರಿತು ಝೆಕೋಸ್ಲೋವೆಕಿಯಾ. ದೇಶದ ಡಾ. ಪೀಟರ್ ಸಿಟನರ್ ರಿಂದ ಆಹ್ವಾನಿತ ಉಪನ್ಯಾಸವನ್ನು ವಿಶ್ವವಿದ್ಯಾಲಯದ "ರಾಮನ್ ಹಾಲ್" ನಲ್ಲಿ ಆಯೋಜಿಸಲಾಗಿತ್ತು.

5. ದಿನಾಂಕ 25.02.2023ರಂದು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಮಾಜ ಕಲ್ಯಾಣ ಇಲಾಖೆ, ಅಂಬೇಡ್ಕರ್ ಎಕಾನಿಮಿಕ್ಸ್ ಫೌಂಡೇಶನ್, ಬಿ ಬಸವಲಿಂಗಪ್ಪ ಇನ್ಸಿಟಿಟ್ಯೂಷನ್ ಫಾರ್ ಡೆವಲಪ್‌ಮೆಂಟ್ ಸ್ಟಡೀಸ್ ಬೆಂಗಳೂರು ರೂರಲ್ ಕಲ್ಚರಲ್ ಫೌಂಡೇಶನ್ ಬೆಂಗಳೂರು ಇವರ ಜಂಟಿ ಸಹಭಾಗಿತ್ವದಲ್ಲಿ "ECONOMIC THOUGHTS & CONTRUBUTIONS OF DR. BABA SAHEB

AMBEDKAR" ವಿಷಯದ ಮೇಲೆ ಒಂದು ದಿವಸದ ಅಂತರಾಷ್ಟ್ರೀಯ ಸಮ್ಮೇಳನ ಜರುಗಿಸಲಾಯಿತು. ರಾಜ್ಯದ ಮಾನ್ಯ ಮುಖ್ಯ ಮಂತ್ರಿಗಳು ಈ ಸಮ್ಮೇಳನ ಉದ್ಘಾಟಿಸಿದರು, ಜ್ಞಾನ ಪ್ರಕಾಶ ಸ್ವಾಮಿಜಿ ಸಾನಿಧ್ಯ ವಹಿಸಿ, ಉನ್ನತ ಶಿಕ್ಷಣ ಸಚಿವರು, ಸಮಾಜ ಕಲ್ಯಾಣ ಸಚಿವರು, ಯುಜಿಸಿ ವಿಶ್ರಾಂತ ಅಧ್ಯಕ್ಷರಾದ ಪ್ರೊ. ಸುಖದೇವ ಥೋರಟ್ ರವರು ಕಾರ್ಯಕ್ರಮದಲ್ಲಿ ಪಾಲ್ಗೊಂಡರು ಕುಲಪತಿಗಳ ಅಧ್ಯಕ್ಷತೆಯಲ್ಲಿ ಸಮ್ಮೇಳನ ಜರುಗಿಸಿತು.

6. ದಿನಾಂಕ 28.02.2023 ರಂದು ರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನು ಜ್ಞಾನಜ್ಯೋತಿ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. 'Global Science for Global Wellbeing' ವಿಷಯ ಕುರಿತು ಗೋಷ್ಠಿಯಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯ ಕೆ.ಉತ್ಪಲನಾಥ್, ಭಾರತೀಯ ಖಗೋಳಶಾಸ್ತ್ರ ಸಂಸ್ಥೆಯ ಪ್ರೊ.ಜಿ.ಸಿ. ಅನುಪಮ, ಭಾಗವಹಿಸಿದ್ದರು. ಇಂಡಿಯಾನ್ ಅಕಾಡೆಮಿ ಆಫ್ ಸೈನ್ಸ್ ಉಪಾಧ್ಯಕ್ಷರಾದ ಪ್ರೊ. ವಿಕ್ರಮ ಜಯರಾಮ, ಮುಖ್ಯ ಅತಿಥಿಗಳಾಗಿ ಆಗಮಿಸಿ ವಿಚಾರ ಮಂಡಿಸಿದರು. ಮಾನ್ಯ ಕುಲಪತಿಗಳು ಅಧ್ಯಕ್ಷತೆ ವಹಿಸಿದ್ದರು.

7. ದಿನಾಂಕ 08.03.2023ರಂದು ವಿಜಯವಾಣಿ ದಿನಪತ್ರಿಕೆ ಹಾಗೂ ವಿಶ್ವವಿದ್ಯಾನಿಲಯದ ಸಹಯೋಗದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಯೋಜಿಸಲಾಗಿತ್ತು ರಾಜ್ಯದ ಮುಖ್ಯ ಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿ ಅವರು ಈ ಸಮಾರಂಭದ ಉದ್ಘಾಟನೆ ಮಾಡಿದರು. ನಮ್ಮ ವಿಶ್ವವಿದ್ಯಾನಿಲಯದ ಅಧ್ಯಾಪಕರು, ಅಧ್ಯಾಪಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದರು.

8. 10.03.2023ರಂದು ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಮತ್ತು ಚುನಾವಣಾ ಆಯೋಗದ ಸಹಯೋಗದಲ್ಲಿ "VOTER ENROLLEMENT AWARENESS DRIVE" (Voter Registration and Aadhaar Card Linking Drive) ಜರುಗಿಸಲಾಗಿತ್ತು, ಈ ಸಂದರ್ಭದಲ್ಲಿ ಚುನಾವಣಾ ಆಯೋಗದ ಅಧಿಕಾರಿಗಳು ಭಾಗವಹಿಸಿ ಮತದಾರರ ನೊಂದಣಿ ಹಾಗೂ ಅದನ್ನು ಆಧಾರ್ ಕಾರ್ಡ್ ಜೊತೆಗೆ ಲಿಂಕ್ ಮಾಡುವ ಕುರಿತು ಮಾಹಿತಿ ನೀಡಿದರು ವಿದ್ಯಾರ್ಥಿಗಳಿಗೆ ಈ ಕಾರ್ಯಕ್ರಮ ಹೆಚ್ಚು ಉಪಯುಕ್ತವಾಗಿತ್ತು ಕುಲಪತಿಗಳು ಪ್ರೊ. ಲಿಂಗರಾಜ ಗಾಂಧಿಯವರು ಈ ಕಾರ್ಯಕ್ರಮದ ಉದ್ಘಾಟನೆ ಮಾಡಿ ಪ್ರಸ್ತಾವಿಕವಾಗಿ ಮಾತನಾಡಿದರು.

9. ದಿನಾಂಕ 14.03.2023 ರಂದು ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ಮಾನ್ಯ ಕುಲಾಧಿಪತಿಗಳ ಅಧ್ಯಕ್ಷತೆಯಲ್ಲಿ ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳ ಕುಲಪತಿಗಳ ಸಭೆ ಜರುಗಿತು. ಕುಲಪತಿಗಳು ವಿಶ್ವವಿದ್ಯಾನಿಲಯದ ಎನ್‌ಇಪಿ ಕಾರ್ಯ ಚಟುವಟಿಕೆಗಳು, ಕ್ರೀಡೆ, ಎನ್‌ಎಸ್‌ಎಸ್ ಕಾರ್ಯಕ್ರಮಗಳು, ಅಭಿವೃದ್ಧಿ, ಗ್ರಾಮಗಳ ದತ್ತು ಪಡೆಯುವ ಸಂಬಂಧ ಹಾಗೂ ವಿಶ್ವವಿದ್ಯಾನಿಲಯ ಪ್ರಮುಖವಾಗಿ ಎದುರಿಸುತ್ತಿರುವ ಮೂರು ಸಮಸ್ಯೆಗಳ ಪಿಪಿಟಿ ಸಾದರ ಪಡಿಸಿದರು. ಸದರಿ ಸಭೆಯಲ್ಲಿ NEP ಅನುಷ್ಠಾನದ ಹಿನ್ನಲೆಯಲ್ಲಿ ಸ್ನಾತಕ ವ್ಯಾಸಂಗದ ಕನ್ನಡ ಭಾಷೆಯ ಪಠ್ಯಪುಸ್ತಕಗಳ ರಚನೆ ಮತ್ತು ಭಾಷಾಂತರ ಕುರಿತಂತೆ ಹಾಗೂ ವಿಶ್ವವಿದ್ಯಾಲಯಗಳು ಎದುರಿಸುತ್ತಿರುವ ಮೂರು ಪ್ರಮುಖ ಸಮಸ್ಯೆಗಳು, ರಾಷ್ಟ್ರೀಯ ಶಿಕ್ಷಣ ನೀತಿ – 2020 ಅನುಷ್ಠಾನ ವಿದ್ಯಾರ್ಥಿಗಳಿಗೆ ಕ್ರೀಡೆ, ಸಾಂಸ್ಕೃತಿಕ ಅಭಿವೃದ್ಧಿ ಒಳಗೊಂಡಂತೆ ಸಮಗ್ರ ಶಿಕ್ಷಣ ನೀಡುವುದು ಹಾಗೂ ಗ್ರಾಮೀಣ ಪ್ರದೇಶಗಳ ದತ್ತು ಪಡೆಯುವಿಕೆ ಸಬಂಧಿಸಿದಂತೆ ವಿಸ್ತೃತವಾಗಿ ಚರ್ಚಿಸಲಾಯಿತು.

ನಂತರ ಕಾರ್ಯ ಸೂಚಿಯನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು.

ಸದಸ್ಯರಾದ ಶ್ರೀ ಎಂ.ವಿ. ರಂಗಪ್ಪನವರು ಸಭೆಯ ಕಾರ್ಯಕಲಾಪಗಳ ನೇರ ಪ್ರಸಾರ ವ್ಯವಸ್ಥೆ ಮಾಡಿರುವುದಕ್ಕೆ ಮಾಹಿತಿ ಕೋರಿದರು. ಸಭೆಯ ಕಾರ್ಯಕಲಾಪಗಳನ್ನು ಕುಲಾಧಿಪತಿಗಳ ಕಛೇರಿಯ ಸಿಂಡಿಕೇಟ್ ಸಭಾ ನಡವಳಿಗಳ ದಿನಾಂಕ. 27.10.2021 ರ ಮಾರ್ಗಸೂಚಿ ಸುತ್ತೋಲೆ ಪ್ರಕಾರ ನಡವಳಿಗಳನ್ನು ರಿಕಾರ್ಡ್ ಮಾಡಲಾಗುತ್ತಿರುವುದಾಗಿ ತಿಳಿಸಲಾಯಿತು. Good Governance ಮಾಸಾಚರಣೆಯ ಸಂದರ್ಭದಲ್ಲಿ ಸರ್ಕಾರದ ಆದೇಶದ ಪ್ರಕಾರ ನೇರ ಪ್ರಸಾರದ ವ್ಯವಸ್ಥೆ ಮಾಡಲಾಗಿದ್ದು, ಇದರ ಸಾಧಕ ಭಾದಕಗಳ ಕುರಿತು ಸರ್ಕಾರದ ಗಮನಕ್ಕೆ ತರಲಾಗಿದೆ ಎಂದು ತಿಳಿಸಲಾಯಿತು. ಮಾನ್ಯ ಸದಸ್ಯರು ಸರ್ಕಾರದ ಆದೇಶದ ಪ್ರತಿ ಹಾಗೂ ಕುಲಾಧಿಪತಿಗಳ ಕಛೇರಿ ಸುತ್ತೋಲೆ ಪ್ರತಿ ನೀಡಬೇಕೆಂದು ಕೋರಿದರು. ಸದರಿ ಸುತ್ತೋಲೆ ಪ್ರತಿಯನ್ನು ಈಗಾಗಲೇ ಸದಸ್ಯರಿಗೆ ಒದಗಿಸಲಾಗಿದ್ದು, ಅದರ ಪ್ರತಿಯನ್ನು ಪುನಃ ನೀಡಲಾಗುವುದೆಂದು ತಿಳಿಸಲಾಯಿತು.

| | |
|---|---|
| **ವಿಷಯ ಸಂಖ್ಯೆ: 1** | **ದಿನಾಂಕ 10.11.2022 ರಂದು ಜರುಗಿದ ಸಿಂಡಿಕೇಟ್ 20ನೇ ಸಾಮಾನ್ಯ ಸಭೆ, ದಿನಾಂಕ 16.12.2022 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆ ಹಾಗೂ ದಿನಾಂಕ 09.02.2023 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಗಳ ದೃಢೀಕೃತ ನಡವಳಿಗಳ ಮೇಲೆ ಕೈಗೊಂಡ ಅನುಪಾಲನಾ ವರದಿ** |

ವಿವರಣೆ:

ದಿನಾಂಕ. 10.11.2022 ರ ನಡವಳಿಗಳ ಕ್ರ.ಸ.2 ರ ಕುರಿತಂತೆ ಸದಸ್ಯರಾದ ಶ್ರೀ ಸತೀಶ್ ರವರು Infosys ಸಂಸ್ಥೆಯವರು Spring Board ಕುರಿತಂತೆ ಕಾಲೇಜು ಅಧ್ಯಾಪಕರಿಗೆ ಮತ್ತು ವಿದ್ಯಾರ್ಥಿಗಳಿಗೆ ತರಬೇತಿ ಕಾರ್ಯಾಗಾರದ ವ್ಯವಸ್ಥೆ ಮಾಡಬೇಕೆಂದು ಕೋರಿದರು. ಈ ಕುರಿತು ಒಡಂಬಡಿಕೆ ಅಂತಿಮಗೊಂಡ ನಂತರ ತರಬೇತಿ ಕಾರ್ಯಾಗಾರದ ವ್ಯವಸ್ಥೆ ಮಾಡಲಾಗುವುದು ಎಂದು ತಿಳಿಸಲಾಯಿತು.

ಕ್ರ.ಸಂ.6 ಕುರಿತಂತೆ ಸದಸ್ಯರಾದ ಸಮರ್ಥ ಮುನಿರಾಜು ರವರು ತಾಂತ್ರಿಕ ಮತ್ತು ಸಹಾಯ ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆ ಕುರಿತು ಮಾಹಿತಿ ಬಯಸಿದರು. ಪ್ರಸ್ತಾವನೆ ಸರ್ಕಾರಕ್ಕೆ ಸಲ್ಲಿಸಲಾಗಿದೆ ಎಂದು ತಿಳಿಸಲಾಯಿತು.

ಕ್ರ.ಸ. 13 ಕುರಿತಂತೆ ಸದಸ್ಯರಾದ ಶ್ರೀ ಸಮರ್ಥ ಮುನಿರಾಜು ಮತ್ತು ಶ್ರೀ ಎಂ.ವಿ ರಂಗಪ್ಪನವರು ಪ್ರಸ್ತಾಪಿಸಿ, ದಿನಾಂಕ. 10.11.2022 ರಂದು ಜರುಗಿದ ಸಿಂಡಿಕೇಟ್ ಸಭೆಯ ನಡವಳಿಗಳಲ್ಲಿ ದಾಖಲಿಸಲಾದ ಸದರಿ ವಿಷಯದ ತೀರ್ಮಾನದ ಕುರಿತು ತಾವು ಆಕ್ಷೇಪಣೆಗಳನ್ನು ಸಲ್ಲಿಸಿರುವುದನ್ನು ಪ್ರಸ್ತಾಪಿಸಿ, ಅಂದಿನ ಸಭೆಯಲ್ಲಿ ವಿಶ್ವವಿದ್ಯಾನಿಲಯದಿಂದ ಪಾವತಿಸಲಾದ ಬಿಲ್ಲುಗಳ ಕಡತವನ್ನು ಸಭೆಯಲ್ಲಿ ಪ್ರಸ್ತುತ ಪಡಿಸಿದ್ದು ಅವುಗಳ ಪ್ರತಿಗಳು ನೀಡಲು ಸದಸ್ಯರು ಕೋರಿದ್ದರು. ಅದರಂತೆ ತೀರ್ಮಾನ ದಾಖಲಾಗಿಲ್ಲವೆಂದು ತಿಳಿಸಿ "ಅನುಮೋದಿಸಲಾಯಿತು" ಎಂದು ನಮೂದಿಸಿರುವುದಕ್ಕೆ ಆಕ್ಷೇಪಣೆ ವ್ಯಕ್ತಪಡಿಸಿ ಇದನ್ನು ಸಿಂಡಿಕೇಟ್ ತೀರ್ಮಾನವೆಂದು ಒಪ್ಪಿಕೊಳ್ಳಲು ಆಗುವುದಿಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಕುಲಸಚಿವರು ವಿವರಣೆ ನೀಡಿ ಸದಸ್ಯರು ಮೂರು ಪ್ರತ್ಯೇಕ ವಿಷಯಗಳ ಮಾಹಿತಿಯನ್ನು ಕೋರಿ ಪ್ರಸ್ತಾವನೆ ಸಲ್ಲಿಸಿದ್ದರು. ಅದರಂತೆ ಸದಸ್ಯರು ಕೋರಿದ ಮೂರು ಮಾಹಿತಿಗಳನ್ನು ಸಭೆಯಲ್ಲಿ ಮಂಡಿಸಲಾಯಿತು. ಓಚರಗಳನ್ನು ಒಳಗೊಂಡ ಕಡತವನ್ನು ಸಭೆಯಲ್ಲಿ ಮಂಡಿಸಿ ಸದಸ್ಯರಿಗೆ ಅದನ್ನು ಅವಲೋಕಿಸಲು ತಿಳಿಸಲಾಯಿತು. ಸದಸ್ಯರು ಪ್ರತಿಗಳನ್ನು ನೀಡಬೇಕೆಂದು ಹೇಳಿದಾಗ ಕಡತದಲ್ಲಿರುವ ಪುಟಗಳ ಸಂಖ್ಯೆ ಹೆಚ್ಚು

ಇರುವುದರಿಂದ ಪ್ರತಿಗಳನ್ನು ಒದಗಿಸುವುದು ಕಷ್ಟವಾಗುತ್ತದೆ ಎಂದು ತಿಳಿಸಲಾಯಿತು. ಈ ಕುರಿತು ಯಾವುದೇ ವ್ಯತಿರಿಕ್ತ ಅಭಿಪ್ರಾಯ ವ್ಯಕ್ತವಾಗದೇ ಇರುವುದರಿಂದ ಅನುಮೋದಿಸಲಾಯಿತು ಎಂದು ತಿಳಿಸಿದರು.

ಸದಸ್ಯರಾದ ಸಮರ್ಥ ಮುನಿರಾಜು ರವರು ಸದರಿ ವಿಷಯದ ತೀರ್ಮಾನ ಕುರಿತು ನಿಯಮಾನುಸಾರ ಆಕ್ಷೇಪಣೆಯನ್ನು ಸಲ್ಲಿಸಿರುವುದರಿಂದ ಅವುಗಳನ್ನು ಸಭೆಯ ಗಮನಕ್ಕೆ ತರಬೇಕಾಗಿತ್ತು ಎಂದು ತಿಳಿಸಿದರು.

ಅಧ್ಯಕ್ಷರು ವಿವರಣೆ ನೀಡಿ ಸದರಿ ವಿಷಯ ಸಂಖ್ಯೆ 13 ರಲ್ಲಿ ಇಬ್ಬರು ಸಿಂಡಿಕೇಟ್ ಸದಸ್ಯರು ಮಂಡಿಸಿದ ಎರಡು ಪ್ರತ್ಯೇಕ ವಿಷಯಗಳಾಗಿರುತ್ತವೆ. 13(1) ರಲ್ಲಿ ಒಂದು ಲಕ್ಷಕ್ಕಿಂತ ಹೆಚ್ಚಿದ ಮೊತ್ತದ ಬಿಲ್ಲುಗಳನ್ನು ಸಿಂಡಿಕೇಟ್ ಸಭೆಯ ಒಪ್ಪಿಗೆ ಪಡೆದು ಪಾವತಿಸುವ ಕುರಿತಾಗಿದ್ದು – ಈ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮಕ್ಕೆ ಸರ್ಕಾರ ತಿದ್ದುಪಡಿ ತಂದು ಈ ಹಿಂದೆ ಕೋಟೇಶನ್ ಆಧಾರದ ಮೇಲೆ ಖರೀದಿಸಲು ಇದ್ದ ಒಂದು ಲಕ್ಷ ರೂಪಾಯಿಗಳ ಮಿತಿಯನ್ನು 5.00 ಲಕ್ಷ ರೂಗಳಿಗೆ ವಿಸ್ತರಿಸಲಾಗಿದೆ. ಸದರಿ ತಿದ್ದುಪಡಿಯ ವಿಷಯವನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ. ಅದರ ಪ್ರಕಾರ 5 ಲಕ್ಷ ರೂಪಾಯಿವರೆಗಿನ ವೆಚ್ಚಗಳನ್ನು ಕೋಟೇಶನ್ ಆಧಾರದ ಮೇಲೆ ನಿಯಮಾವಳಿಗಳನ್ನು ಪಾಲಿಸಿ ಕ್ರಮ ವಹಿಸಲಾಗುತ್ತಿದೆ. ಇದು ಕೆಟಿಪಿಪಿ ಕಾಯ್ದೆ ಹಾಗೂ ಸಿಂಡಿಕೇಟ್ ತೀರ್ಮಾನದ ಅನುಗುಣವಾಗಿರುವುದರಿಂದ ಸದರಿ ನಿಯಮಾವಳಿಗಳ ಪ್ರಕಾರ ಕೈಕೊಳ್ಳಲಾಗುವುದೆಂದು ತೀರ್ಮಾನ ದಾಖಲಿಸಲಾಗಿದೆ ಎಂದು ತಿಳಿಸಿದರು.

13(2) ರಲ್ಲಿ ಸದಸ್ಯರು 3 ವಿಷಯಗಳ ಕುರಿತು ಮಾಹಿತಿ ಕೋರಿದ್ದು, ಈ ಸಂಬಂಧ ವೆಚ್ಚದ ಎಲ್ಲಾ ವಿವರಣೆಗಳನ್ನು ಒಳಗೊಂಡ ಆಯಾಯ ವರ್ಷದ ವಾರ್ಷಿಕ ಲೆಕ್ಕ ಪತ್ರಗಳನ್ನು ಸಭೆಯಲ್ಲಿ ಮಂಡಿಸಿ ಒಪ್ಪಿಗೆ ಪಡೆಯಲಾಗಿದೆ. ಇದಕ್ಕೂ ಮುನ್ನ ನಿಯಮಾನುಸಾರ ಹಣಕಾಸು ಸಮಿತಿ ವಾರ್ಷಿಕ ಲೆಕ್ಕ ಪತ್ರಗಳಿಗೆ ಅನುಮೋದನೆ ನೀಡಿರುವ ವಿಷಯವನ್ನು ಸಭೆಗೆ ತಿಳಿಸಿದರು. ಸದಸ್ಯರು ಕೇಳಿದ ಮಾಹಿತಿಯನ್ನು ಸಭೆಯಲ್ಲಿ ಮಂಡಿಸಲಾಗಿತ್ತು. ಅವುಗಳಲ್ಲಿ ರೂ.1.00 ಲಕ್ಷಕ್ಕಿಂತ ಹೆಚ್ಚಿನ ಮೊತ್ತದ ಪಾವತಿಗಳ ವಿವರಗಳನ್ನು ಒಳಗೊಂಡ ಕಡತವನ್ನು ಸಭೆಯಲ್ಲಿ ಮಂಡಿಸಲಾಗಿತ್ತು. ಕಡತ ಹೆಚ್ಚಿನ ಪುಟಗಳನ್ನು ಒಳಗೊಂಡಿರುವುದರಿಂದ ಅದನ್ನು ಸದಸ್ಯರು ಅವಲೋಕಿಸಬಹುದೆಂದು ತಿಳಿಸಲಾಯಿತು. ಸದಸ್ಯರು ಮಾಹಿತಿಯನ್ನು ಮಾತ್ರ ಕೋರಿದ್ದು, ಕೋರಲಾದ ಮಾಹಿತಿ ಒದಗಿಸಲಾಗಿದೆ. ಈ ಕುರಿತು ಯಾವುದೇ ವ್ಯತಿರಿಕ್ತವಾದ ಅಭಿಪ್ರಾಯ ವ್ಯಕ್ತವಾಗದೇ ಇರುವುದರಿಂದ "ಮಾಹಿತಿಯನ್ನು ಸಭೆಯಲ್ಲಿ ಒದಗಿಸಲಾಯಿತು ಮತ್ತು ಅನುಮೋದಿಸಲಾಯಿತು" ಎಂದು ದಾಖಲಿಸಲಾಗಿದೆ.

ಸದಸ್ಯರಾದ ಶ್ರೀ ಸತೀಶ್ ಚರ್ಚೆಯಲ್ಲಿ ಭಾಗವಹಿಸಿ ತಾವು ಈ ಕುರಿತು ಇ-ಮೇಲ್ ಕಳಿಸಿದ್ದು ತಾವು ರಸಾಯನಶಾಸ್ತ್ರ ವಿಭಾಗದ ರಾಸಾಯನಿಕ ಮತ್ತು ಉಪಕರಣಗಳ ಖರೀದಿ ಕುರಿತಾಗಿ ತೀರ್ಮಾನದಲ್ಲಿ ಸೇರಿಸಿರುವುದು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಬೇಗ ಖರೀದಿ ವ್ಯವಸ್ಥೆ ಮಾಡಬೇಕೆಂಬ ಉದ್ದೇಶ ಹೊಂದಿದ್ದು ಉಳಿದಂತೆ ಸಭಾಧ್ಯಕ್ಷರು ನೀಡಿರುವ ವಿವರಣೆ ಹಾಗೂ ತೀರ್ಮಾನ ಸರಿಯಾಗಿದೆ ಎಂದು ಹೇಳಿದರು. ಡಾ. ಕೆ. ಎಂ ಮಹೇಶ್ ಮತ್ತು ಮೊಹಮ್ಮದ್ ಸೊಹೆಲ್ ಇಕ್ಬಾಲ್ ರವರು ಸಹಮತ ವ್ಯಕ್ತಪಡಿಸಿದರು.

ಈ ಹಂತದಲ್ಲಿ ಸದಸ್ಯರಾದ ಶ್ರೀ ಸಮರ್ಥ ಮುನಿರಾಜು ರವರು ತಮ್ಮ ವಾದವನ್ನು ಪುನಃ ಮಂಡಿಸಲು ಪ್ರಯತ್ನಿಸಿ "Documents were not placed" "Documents were Dumped" ಎಂದು ಆವೇಶದಿಂದ ಮಾತನಾಡಲು, ಸಭಾಧ್ಯಕರು ಕೈಕೊಂಡ ಕ್ರಮದ ವರದಿಯ ಮೇಲೆ ಹೆಚ್ಚಿನ ಚರ್ಚೆಯ ಅಗತ್ಯವಿಲ್ಲ ಸದಸ್ಯರ ಅಭಿಪ್ರಾಯಗಳನ್ನು ದಾಖಲಿಸಲಾಗುವುದು ಎಂದು ತಿಳಿಸಿದರು.

**ಸಿಂಡಿಕೇಟ್ ತೀರ್ಮಾನ:**

**ದಿನಾಂಕ 10.11.2022 ರ ಸಿಂಡಿಕೇಟ್ ಸಭೆಯ ವಿಷಯ ಸಂಖ್ಯೆ 13 (2) ರಲ್ಲಿ ನಮೂದಿಸಿದ ತೀರ್ಮಾನ ಕುರಿತಂತೆ ದಾಖಲೆಗಳನ್ನು ಸಭೆಯಲ್ಲಿ "Place" ಮಾಡದೇ "Dump" ಮಾಡಿರುವುದಾಗಿ ಸದಸ್ಯರಾದ ಶ್ರೀ ಸಮರ್ಥ ಮುನಿರಾಜುರವರ ಹಾಗೂ ಶ್ರೀ ಎಂ.ವಿ ರಂಗಪ್ಪನವರ ಅಭಿಪ್ರಾಯಗಳನ್ನು ದಾಖಲಿಸಿ, ದಿನಾಂಕ. 10.11.2022 ರಂದು ಜರುಗಿದ ಸಿಂಡಿಕೇಟ್ 20ನೇ ಸಾಮಾನ್ಯ ಸಭೆ, ದಿನಾಂಕ 16.12.2022 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆ ಹಾಗೂ ದಿನಾಂಕ 09.02.2023 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಗಳ ನಡವಳಿಗಳನ್ನು ಅನುಮೋದಿಸಲಾಯಿತು.**

ವಿಷಯ ಸಂಖ್ಯೆ- 2

ವಿಷಯ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಪರೀಕ್ಷೆಗಳಿಗೆ ಬೇಕಾಗುವ ಅಂಕಪಟ್ಟಿ ಖರೀದಿಸುವ ಬಗ್ಗೆ.

***ಪರಾಮರ್ಶಕ ಟಿಪ್ಪಣಿ:***

NEP ಬರುವ ಮೊದಲು ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸಲು ಟೆಂಡರ್ ಪಡೆದಿರುವ ಸಂಸ್ಥೆಯು, ಟೆಂಡರ್‌ನಲ್ಲಿನ ಕರಾರಿನಂತೆ ಹೊರಗುತ್ತಿಗೆ ಪಡೆದಿರುವ ಸಂಸ್ಥೆ ಅಂಕಪಟ್ಟಿಗಳನ್ನು ಖರೀದಿಸಿ ಕೊಡುತ್ತಿತ್ತು. NEP ಬಂದ ನಂತರ ಪರೀಕ್ಷೆಗಳು ಮೌಲ್ಯಮಾಪನ, ಫಲಿತಾಂಶ ಪ್ರಕಟಣೆಗಳನ್ನು ವಿಶ್ವವಿದ್ಯಾಲಯವೇ UUCMS ಪೋರ್ಟಲ್ ಮೂಲಕ ಮಾಡುತ್ತಿರುವುದರಿಂದ, ಅಂಕಪಟ್ಟಿಗಳನ್ನು ಖರೀದಿಸಿ, ಮುದ್ರಿಸಿ ವಿದ್ಯಾರ್ಥಿಗಳಿಗೆ ವಿತರಿಸಬೇಕಾಗಿದೆ. ಇಲ್ಲಿಯವರೆಗೆ, NEP ಅಡಿಯಲ್ಲಿ 1 ಮತ್ತು 2ನೇ ಸೆಮಿಸ್ಟರ್ ಪರೀಕ್ಷೆಗಳನ್ನು ಯಶಸ್ವಿಯಾಗಿ ನಡೆಸಲಾಗಿದೆ.

ಸದ್ಯದಲ್ಲಿಯೇ 1 ಮತ್ತು 3ನೇ ಸೆಮಿಸ್ಟರ್ ಪರೀಕ್ಷೆಗಳು ಪ್ರಾರಂಭವಾಗಲಿದ್ದು, ಎಲ್ಲಾ ವಿದ್ಯಾರ್ಥಿಗಳಿಗೆ ಅಂಕಪಟ್ಟಿಗಳನ್ನು ಮುದ್ರಿಸಿ ವಿತರಿಸಬೇಕಾಗುತ್ತದೆ. ಒಂದು ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸುಗಳಿಗೆ ಸುಮಾರು 45,000/- ಅಂಕಪಟ್ಟಿಗಳು ಬೇಕಾಗಬಹುದು ಅದರಂತೆ ಈಗ ನಡೆದಿರುವ ಪರೀಕ್ಷೆಗಳು ಮತ್ತು ಈಗ ನಡೆಯುತ್ತಿರುವ / ನಡೆಯಲಿರುವ ಪರೀಕ್ಷೆಗಳಿಗೆ ಒಟ್ಟು 1,80,000 ಖಾಲಿ ಅಂಕಪಟ್ಟಿಗಳು ಬೇಕಾಗುತ್ತವೆ. ಅದರೆ ಅಂಕಪಟ್ಟಿ ತಿದ್ದುಪಡಿ ಮತ್ತು ಮುಂದೆ ನಡೆಯುವ ಪರೀಕ್ಷೆಗಳಿಗೆ ಬೇಕಾಗುವ ಅಂಕಪಟ್ಟಿಗಳನ್ನು ಗಮನದಲ್ಲಿರಿಸಿ ಸುಮಾರು 5.00 ಲಕ್ಷ ಅಂಕಪಟ್ಟಿ ಖರೀದಿಸಲು ಪ್ರಸ್ತಾವನೆ ಸಲ್ಲಿಸಿದೆ. MSIL ಸಂಸ್ಥೆಯಿಂದ ಖರೀದಿಸಿದರೆ ಸುಮಾರು ರೂ. 39.00/- + ತೆರಿಗೆ ಪ್ರತಿ ಅಂಕಪಟ್ಟಿಗೆ ವೆಚ್ಚವಾಗಲಿದ್ದು, ಅಂಕಪಟ್ಟಿ ಖರೀದಿಸಲು MSIL ಸಂಸ್ಥೆಗೆ ಸರ್ಕಾರ KTTP ಕಾಯ್ದೆ 4(g) ವಿನಾಯಿತಿ ನೀಡಿದೆ. ಆದುದರಿಂದ ಸರ್ಕಾರ ನೀಡಿರುವ ನಿರ್ದೇಶನದಂತೆ ಅಂಕಪಟ್ಟಿಗಳನ್ನು MSIL ಸಂಸ್ಥೆಯಿಂದ ಖರೀದಿಸಲು ಅನುಮೋದನೆ ಕೋರಿ ಸಿಂಡಿಕೇಟಿನ ಮುಂದೆ ನಿರ್ಣಯಕ್ಕಾಗಿ ಮಂಡಿಸಿದೆ.

ವಿವರಣೆ:

ಕುಲಸಚಿವರು (ಮೌಲ್ಯಮಾಪನ) ರವರು ವಿವರಣೆ ನೀಡಿ, ಮಾನ್ಯ ಕುಲಾಧಿಪತಿಗಳ ಕಾರ್ಯಾಲಯವರು ಹೊರಡಿಸಲಾದ ದಿನಾಂಕ 27.12.2022 ರ ಪತ್ರದಲ್ಲಿ ಅಂಕಪಟ್ಟಿಗಳ ಭೌತಿಕ ಪ್ರತಿಗಳನ್ನು MSIL ಸಂಸ್ಥೆಯಿಂದ ಖರೀದಿಸಿ ವಿದ್ಯಾರ್ಥಿಗಳಿಗೆ ನೀಡುವ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ಸದಸ್ಯರಾದ ಶ್ರೀ ಎಂ.ವಿ ರಂಗಪ್ಪ ನವರು ಅಂಕಪಟ್ಟಿ Soft copy ನೀಡುವಂತೆ ಸರ್ಕಾರದ ಸೂಚನೆ ಇರುವುದನ್ನು ಪ್ರಸ್ತಾಪಿಸಿದರು ಹಾಗೂ MSIL ಸಂಸ್ಥೆಯವರು ಉಪಯೋಗಿಸುವ ಕಾಗದದ ಗುಣಮಟ್ಟ ಅದರ GSM ಇತ್ಯಾದಿಗಳಲ್ಲಿ ಒಳಗೊಂಡಂತೆ, ತಾಂತ್ರಿಕ ಶಿಫಾರಸ್ಸು ಪಡೆಯಬೇಕೆಂಬ ಸಲಹೆ ನೀಡಿದರು.

ಸಿಂಡಿಕೇಟ್ ತೀರ್ಮಾನ:

**ಕಾಗದದ ಗುಣಮಟ್ಟದ ಕುರಿತು ಸರ್ಕಾರಿ ಮುದ್ರಣಾಲಯ ತಂತ್ರಜ್ಞರಿಂದ ವರದಿ ಹಾಗೂ ಅಂಕಪಟ್ಟಿಗಳ ಮಾದರಿಗಳನ್ನು, ಅದರಲ್ಲಿ ಒಳಗೊಂಡಿರುವ ಸುರಕ್ಷತಾ ಕ್ರಮಗಳ ಕುರಿತು ವಿವರಗಳನ್ನು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಬೇಕೆಂದು ಸೂಚಿಸಿ ವಿಷಯವನ್ನು ಮುಂದೂಡಲಾಯಿತು.**

ವಿಷಯ ಸಂಖ್ಯೆ- 3

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ದ್ವಿತೀಯ ಘಟಿಕೋತ್ಸವದ ಖರ್ಚು ವೆಚ್ಚಗಳನ್ನು ಕೆ.ಟಿ.ಪಿ.ಪಿ ಕಾಯ್ದೆಯ ಅನುಸಾರ ಕೈಗೊಳ್ಳುವ ಕುರಿತು.

ಪರಾಮರ್ಶಕ ಟಿಪ್ಪಣಿ:

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ದ್ವಿತೀಯ ಘಟಿಕೋತ್ಸವವನ್ನು ಏಪ್ರಿಲ್/ಮೇ ತಿಂಗಳಲ್ಲಿ ಆಯೋಜಿಸಲು ದಿನಾಂಕ 09.02.2023ರ ಸಿಂಡಿಕೇಟ್ ಅನುಮೋದನೆ ನೀಡಿರುವಂತೆ ವಿಶ್ವವಿದ್ಯಾನಿಲಯವು ಪೂರ್ವಸಿದ್ಧತೆಗಳನ್ನು ಆರಂಭಿಸಿದೆ.

ಘಟಿಕೋತ್ಸವದ ಆಯೋಜನೆಗೆ ಸಂಬಂಧಿಸಿದಂತೆ ಜ್ಞಾನಜ್ಯೋತಿ ಸಭಾಂಗಣದ ವೇದಿಕೆ, LED Wall, ವೇದಿಕೆಯ ಆಸನ ವ್ಯವಸ್ಥೆ, ಸಭಾಂಗಣದ ಆಸನ ವ್ಯವಸ್ಥೆಗೆ ಪೂರಕ ಸಿದ್ಧತೆಗಳು, ಹೂವಿನ ಅಲಂಕಾರ, ಅಗತ್ಯ ಕಾರ್ಪೆಟ್ ಹೊದಿಕೆ, ಸಭಾಂಗಣದ ಹೊರಗಿನ ಮತ್ತು ಸುತ್ತಲಿನ ಪ್ರದೇಶದಲ್ಲಿ ಕಾರ್ಪೆಟ್ ಹೊರಾಂಗಣ ಸಿದ್ಧತೆಗಳು, ಅಲಂಕಾರಗಳು.

ಹವಾನಿಯಂತ್ರಿತ ವ್ಯವಸ್ಥೆ, ವಿವಿಐಪಿ(VVIP) Areasಗಳ ಸಿದ್ಧಪಡಿಸುವುದು, Media Lounge, Photography ಮತ್ತು Videography, Sound and Lighting ವ್ಯವಸ್ಥೆ, ಕ್ಯಾಂಪಸ್‌ನಲ್ಲಿನ ಹೊರಾಂಗಣದಲ್ಲಿನ Lighting ವ್ಯವಸ್ಥೆ, ಸಭಾಂಗಣದ ಹೊರಗೆ Lighting ವ್ಯವಸ್ಥೆ ಮತ್ತು ಸಭಾಂಗಣದ ಹೊರಗೆ Dining ವ್ಯವಸ್ಥೆಗಾಗಿ ಜರ್ಮನ್ ಟೆಂಟ್ ಮತ್ತು ಇತರ ವ್ಯವಸ್ಥೆಗಳು Printing and Fabrication Work, Generator ಮತ್ತಿತರ ಸೌಕರ್ಯಗಳನ್ನು ಮತ್ತು ಸೇವೆಗಳನ್ನು ಪಡೆದುಕೊಳ್ಳಲು ಕರ್ನಾಟಕ ಸರ್ಕಾರದ

4(G) ವಿನಾಯಿತಿಯಿರುವ M C & A ಮೂಲಕ ಅಂದಾಜು ರೂ.25.00 ಲಕ್ಷಗಳಿಗೆ ಮೀರದಂತೆ ಪಡೆದುಕೊಳ್ಳಲು ಅನುಮೋದನೆಗಾಗಿ ಮಂಡಿಸಿದೆ.

ಮುಂದುವರೆದು, ಘಟಿಕೋತ್ಸವದಲ್ಲಿ ಭಾಗವಹಿಸುವವರಿಗೆ ಭೋಜನಾ ವ್ಯವಸ್ಥೆ ಮತ್ತು High Tea ವ್ಯವಸ್ಥೆಗಳನ್ನು ಮಾಡಲು ಅಗತ್ಯ ಖರ್ಚುಗಳನ್ನು ಮತ್ತು ಘಟಿಕೋತ್ಸವ ಸಮಾರಂಭದ ಸಿದ್ಧತೆಗಾಗಿ ತಗಲುವ ಇತರ ವೆಚ್ಚಗಳನ್ನು ನಿಯಮಾನುಸಾರ ಕೈಗೊಳ್ಳಲು ಸಿಂಡಿಕೇಟ್ ಅನುಮೋದನೆಗಾಗಿ ಮಂಡಿಸಿದೆ.

<u>ಸಿಂಡಿಕೇಟ್ ತೀರ್ಮಾನ:</u>

**ದ್ವಿತೀಯ ಘಟಿಕೋತ್ಸವ ಆಯೋಜನೆಗಾಗಿ ಪ್ರಸ್ತಾವನೆಯಲ್ಲಿ ಸೂಚಿಸಿದ ಖರ್ಚು ವೆಚ್ಚಗಳನ್ನು ಕೆ.ಟಿ.ಪಿ.ಪಿ. ನಿಯಮಾನುಸಾರ ನಿರ್ವಹಿಸಲು ಅನುಮೋದನೆ ನೀಡಲಾಯಿತು.**

ವಿಷಯ ಸಂಖ್ಯೆ–4:

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ದ್ವಿತೀಯ ವಾರ್ಷಿಕ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ವಿತರಿಸಲು ಬೇಕಾಗಿರುವ ಪದವಿ ಪ್ರಮಾಣ ಪತ್ರಗಳನ್ನು ಮುದ್ರಿಸುವ ಕಾರ್ಯವನ್ನು ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ (MSIL) ಸಂಸ್ಥೆಯ ಮುಖಾಂತರ ಪಡೆದುಕೊಳ್ಳುವ ಬಗ್ಗೆ.

***<u>ಪರಾಮರ್ಶಕ ಟಿಪ್ಪಣಿ:</u>***

ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ನಡೆಸಬೇಕಾದ ದ್ವಿತೀಯ ವಾರ್ಷಿಕ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರಗಳನ್ನು ವಿತರಿಸಬೇಕಾಗಿರುತ್ತದೆ.

ಈ ಸಂಬಂಧ ಕರ್ನಾಟಕ ರಾಜ್ಯ ಸರ್ಕಾರದ ಸಚಿವಾಲಯ ಪತ್ರ ಸಂಖ್ಯೆ: ಇಡಿ 323 ಯುಎನ್ಇ 2020 ದಿನಾಂಕ: 29.06.2016ರಲ್ಲಿ MSIL ಸಂಸ್ಥೆಯಿಂದ ಉತ್ಪಾದಿಸಿದ ಪದವಿ ಪ್ರಮಾಣ ಪತ್ರಗಳನ್ನು ಪಡೆದುಕೊಳ್ಳಲು ಆದೇಶಿಸಿರುತ್ತಾರೆ.

ಮಾನ್ಯ ಕರ್ನಾಟಕ ರಾಜ್ಯಪಾಲರ ವಿಶೇಷ ಕಾರ್ಯದರ್ಶಿ, ರಾಜಭವನ, ಬೆಂಗಳೂರು ಇವರು ತಮ್ಮ ಪತ್ರ ಸಂಖ್ಯೆ: No. GS 19 GUM 2022 dated 28.10.2022 and 07.12.2022 ಎಲ್ಲಾ ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ವಿತರಿಸಲು ಸೂಚಿಸಿದ್ದಾರೆ. MSIL ಸಂಸ್ಥೆಗೆ KTPP Act ಪ್ರಕಾರ 4(G) ವಿನಾಯಿತಿ ಪಡೆದಿರುವುದರಿಂದ ಇವರಿಂದ 45 ಸಾವಿರ ಪದವಿ ಪ್ರಮಾಣ ಪತ್ರ ಖರೀದಿಸಲು ಪ್ರಸ್ತಾವನೆ ಸಲ್ಲಿಸಿದೆ.

ಆದುದರಿಂದ, ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ದ್ವಿತೀಯ ವಾರ್ಷಿಕ ಘಟಿಕೋತ್ಸವದಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪಡೆಯುವ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರಗಳನ್ನು ಮುದ್ರಿಸುವ ಕಾರ್ಯವನ್ನು MSIL ಸಂಸ್ಥೆಗೆ ನೀಡುವ ಸಲುವಾಗಿ 45,000 ಪದವಿ ಪ್ರಮಾಣ ಪತ್ರಗಳನ್ನು ಪಡೆದುಕೊಳ್ಳಲು ಅನುಮೋದನೆಗಾಗಿ ಮಂಡಿಸಿದೆ. ಅಂದಾಜು ರೂ. 36,45,000/– + ಅನ್ವಯಿಕ ತೆರಿಗೆ ವೆಚ್ಚಗಳು ಸೇರುತ್ತವೆ.

**ಸಿಂಡಿಕೇಟ್ ತೀರ್ಮಾನ:**

**ಮುಂಬರುವ ಘಟಿಕೋತ್ಸವದಲ್ಲಿ ಪದವಿ ಪ್ರಮಾಣ ಪತ್ರಗಳನ್ನು ನೀಡಬೇಕಾದ ತುರ್ತು ಸಂದರ್ಭವನ್ನು ಪರಿಗಣಿಸಿ MSIL ಸಂಸ್ಥೆಯವರು KTPP Act ಪ್ರಕಾರ 4(G) ವಿನಾಯಿತಿ ಹೊಂದಿರುವುದರಿಂದ ಇವರಿಂದ 45,000 ಪದವಿ ಪ್ರಮಾಣ ಪತ್ರಗಳಲ್ಲಿ ರೂ.36,45,000/- ಗಳ ಅಂದಾಜು ವೆಚ್ಚದಲ್ಲಿ ಖರೀದಿಸಲು ಅನುಮೋದನೆ ನೀಡಲಾಯಿತು.**

ವಿಷಯ ಸಂಖ್ಯೆ-5:

ವಿಷಯ: ದಿನಾಂಕ 16.02.2023 ರಂದು ಜರುಗಿದ 7ನೇ ಕಾಮಗಾರಿ ಸಮಿತಿ ಸಭೆಯ ನಡವಳಿಗಳು

***ಪರಾಮರ್ಶಕ ಟಿಪ್ಪಣಿ:***

ದಿನಾಂಕ: 16-02-2023 ರಂದು ಬೆಂಗಳೂರು ನಗರ ವಿಶ್ವವಿದ್ಯಾಲಯದ ಸೆಂಟ್ರಲ್ ಕಾಲೇಜು ಆವರಣದಲ್ಲಿರುವ ಜ್ಞಾನಜ್ಯೋತಿ ಸಭಾಂಗಣದ ಬೋರ್ಡ್ ರೂಂನಲ್ಲಿ ಜರುಗಿದ 7ನೇ ಕಾಮಗಾರಿ ಸಮಿತಿ ಸಭೆಯ ನಡಾವಳಿಗಳನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

**ಸಿಂಡಿಕೇಟ್ ತೀರ್ಮಾನ:**

**ದಿನಾಂಕ. 16.02.2023 ರಂದು ಜರುಗಿದ ಕಾಮಗಾರಿ ಸಮಿತಿಯ ನಡವಳಿಗಳಿಗೆ ಅನುಮೋದನೆ ನೀಡಿ ವಿಶ್ವವಿದ್ಯಾಲಯದಲ್ಲಿ ಈ ಯೋಜನೆಗಳು ಕಾರ್ಯಗತಗೊಳಿಸಲು ಖಾಯಂ ಸಿಬ್ಬಂದಿಗಳು ಇಲ್ಲದೇ ಇರುವುದರಿಂದ, KTPP ಅಧಿನಿಯಮದ 4(G) ವಿನಾಯಿತಿ ಹೊಂದಿರುವ ಸರ್ಕಾರದಿಂದ ಅನುಮೋದಿತ ಸಂಸ್ಥೆಗಳು KRIDL Nirmiti Kendra ಗಳ ಮೂಲಕ ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ಅನುಮೋದನೆ ನೀಡಲಾಯಿತು.**

ವಿಷಯ ಸಂಖ್ಯೆ: 6

ವಿಷಯ ರಾಷ್ಟ್ರೀಯ ಶಿಕ್ಷಣ ನೀತಿ 2020 ರಡಿಯಲ್ಲಿ ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ವರ್ಗಾವಣೆ/ ಬಹು ಆಗಮನ/ಬಹು ನಿರ್ಗಮನದ ಅಡಿಯಲ್ಲಿ ಅಧ್ಯಯನ ಮುಂದುವರೆಸುವುದರ ಕುರಿತು ಕರ್ನಾಟಕ ಸರ್ಕಾರದ ಆದೇಶ

ಉಲ್ಲೇಖ
1. ಸರ್ಕಾರದ ಆದೇಶ ಸಂ. ಇಡಿ 260 ಯುಎನ್ಇ 2019 (ಭಾಗ-1) ದಿನಾಂಕ.7.08.2021
2. ಸರ್ಕಾರದ ಆದೇಶ ಸಂ. ಇಡಿ 35 ಇಜಿಒವಿ 2020 ದಿನಾಂಕ. 04.08.2020
3. ಸರ್ಕಾರದ ಆದೇಶ ಸಂ. ಇಡಿ 35 ಇಜಿಒವಿ 2020 ದಿನಾಂಕ. 23.11.2020
4. ಸರ್ಕಾರದ ಆದೇಶ ಸಂ. ಇಡಿ 35 ಇಜಿಒವಿ 2021 ದಿನಾಂಕ. 27.07.2021
5. ಸರ್ಕಾರದ ಆದೇಶ ಸಂ.ಇಡಿ 27 ಇಜಿಒವಿ 2022 ದಿನಾಂಕ. 28.02.2023

***ಪರಾಮರ್ಶಕ ಟಿಪ್ಪಣಿ:***

ಉಲ್ಲೇಖ (1) ಸರ್ಕಾರದ ಆದೇಶದಲ್ಲಿ ಉನ್ನತ ಶಿಕ್ಷಣ ಇಲಾಖೆಯ ಅಡಿಯಲ್ಲಿ ಬರುವ ವಿಶ್ವವಿದ್ಯಾಲಯಗಳಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ 2020 ಅನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸಿ ಆದೇಶಿಸಲಾಗಿದೆ.

ಉಲ್ಲೇಖ (2) ಸರ್ಕಾರದ ಆದೇಶದಲ್ಲಿ ರಾಜ್ಯದ ಎಲ್ಲಾ ಸಾರ್ವಜನಿಕ ವಿಶ್ವವಿದ್ಯಾಲಯಗಳು ಮತ್ತು ಅವುಗಳ ವ್ಯಾಪ್ತಿಯಲ್ಲಿ ಬರುವ ಸಂಯೋಜಿತ ಮಹಾವಿದ್ಯಾಲಯಗಳಲ್ಲಿ, ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ನಿರ್ವಹಣಾ ವ್ಯವಸ್ಥೆ (UUCMS) ತಂತ್ರಾಂಶವನ್ನು ಅಭಿವೃದ್ಧಿಪಡಿಸಲು ಆದೇಶ ಹೊರಡಿಸಿ, ಉಲ್ಲೇಖ (3) ಆದೇಶದಲ್ಲಿ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಇವರ ಮೂಲಕ ಈ ಯೋಜನೆಯನ್ನು ನಿರ್ವಹಿಸಲು ಆದೇಶಮಾಡಲಾಗಿದೆ ಅದರಂತೆ ಪ್ರವೇಶ, ಶೈಕ್ಷಣಿಕ ಮತ್ತು ಪರೀಕ್ಷಾ ಮಾಡ್ಯೂಲ್‌ಗಳನ್ನು ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಬಳಕೆಯಲ್ಲಿ ತರಲಾಗಿದೆ.

ಉಲ್ಲೇಖ (4) ಆದೇಶದಲ್ಲಿ ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ನಿರ್ವಹಣಾ ವ್ಯವಸ್ಥೆಯ (UUCMS) ತಂತ್ರಾಂಶದ ಎಲ್ಲ ಮಾಡ್ಯೂಲ್‌ಗಳನ್ನು ಅನುಷ್ಠಾನಗೊಳಿಸಲು ಹಾಗೂ ಯಾವುದೇ ಹೊಸ ತಂತ್ರಾಂಶ ಖರೀದಿ, ಅಭಿವೃದ್ಧಿ ಮತ್ತು ಲೈಸನ್ಸ್ ನವೀಕರಣ ಮಾಡಬಾರದೆಂದು ಆದೇಶಿಸಲಾಗಿದೆ.

ರಾಷ್ಟ್ರೀಯ ಶಿಕ್ಷಣ ನೀತಿ 2020ಯ ಪರಿನಿಯಮಗಳ ಪ್ರಕಾರ ಪ್ರವೇಶ ಪಡೆದ ವಿದ್ಯಾರ್ಥಿಯು ವಿಶ್ವವಿದ್ಯಾಲಯದ ಒಳಗೆ ಒಂದು ಮಹಾವಿದ್ಯಾಲಯದಿಂದ ಇನ್ನೊಂದು ಮಹಾವಿದ್ಯಾಲಯಕ್ಕೆ ಹಾಗೂ ತಾನು ಪ್ರವೇಶ ಪಡೆದ ಮಹಾವಿದ್ಯಾಲಯ ಸಂಯೋಜನೆಗೆ ಒಳಪಡುವ ವಿಶ್ವವಿದ್ಯಾಲಯದಿಂದ ಬೇರೊಂದು ವಿಶ್ವವಿದ್ಯಾಲಯದ ಮಹಾವಿದ್ಯಾಲಯಕ್ಕೆ ವರ್ಗಾವಣೆ ಹೊಂದಲು, ಬಹು ಆಗಮನ/ನಿರ್ಗಮನ ವ್ಯವಸ್ಥೆ ಅಡಿಯಲ್ಲಿ, ಅಧ್ಯಯನ ನಿಲ್ಲಿಸಿ ಪುನ: ಪ್ರವೇಶ ಹೊಂದಲು ಅವಕಾಶವಿರುತ್ತದೆ. ಈ ಕುರಿತು ಅನುಸರಿಸಬೇಕಾದ ಕ್ರಮಗಳು, multiple entry/exit ಅನುಷ್ಠಾನಗೊಳಿಸಲು, ವಿದ್ಯಾರ್ಥಿಯು MOOC ಅಥವಾ ಕಾಲೇಜು/ವಿಶ್ವವಿದ್ಯಾಲಯಗಳ ಹೊರಗೆ ವಿಷಯವಾರು ಕ್ರೆಡಿಟ್ ಗಳಿಸಿದ್ದರೆ ಅವುಗಳನ್ನು ಪರಿಗಣಿಸಬೇಕಾದ ವಿಧಿವಿಧಾನ, ವಿದ್ಯಾರ್ಥಿಗಳ ಕ್ರೆಡಿಟ್ ಗಳನ್ನು ಕ್ರೋಢೀಕರಿಸಿ, ಪದವಿ ವಿತರಣೆ ವಿಧಾನ, ಒಂದೇ ವಿದ್ಯಾರ್ಥಿ ಏಕಕಾಲದಲ್ಲಿ ಬಹು ಪದವಿಗಳನ್ನು ಪಡೆಯಲು ಅನುಸರಿಸಬೇಕಾದ ಕ್ರಮಗಳ ಕುರಿತು ಪ್ರಸ್ತುತ ಜಾರಿಯಲ್ಲಿರುವ ಯು.ಜಿ.ಸಿ. ಹಾಗೂ ಎನ್.ಇ.ಪಿ. ಮಾರ್ಗದರ್ಶಿಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಕೆಳಕಂಡ ಕ್ರಮಗಳನ್ನು ಸೂಚಿಸಿ ಉಲ್ಲೇಖ 5ರಲ್ಲಿ ನಮೂದಿಸಿದ ಆದೇಶ ಹೊರಡಿಸಿದೆ.

1. ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಪದವಿ ಮತ್ತು ಸ್ನಾತಕೋತ್ತರ ತರಗತಿಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಯು ಹಾಲಿ ವಿಶ್ವವಿದ್ಯಾಲಯದ ಒಂದು ಸಂಯೋಜಿತ ಕಾಲೇಜಿನಿಂದ ಅದೇ ವಿಶ್ವವಿದ್ಯಾಲಯದ ಇನ್ನೊಂದು ಸಂಯೋಜಿತ ಕಾಲೇಜಿಗೆ ವರ್ಗಾವಣೆ ಬಯಸಿದಲ್ಲಿ, ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿಯೇ ಬೆಸ ಸಂಖ್ಯೆಯ ಸೆಮಿಸ್ಟರ್‌ಗಳಿಗೆ UUCMS ತಂತ್ರಾಂಶ ಬಳಸಿಕೊಂಡು ವರ್ಗಾವಣೆಗೊಳ್ಳಲು ಅವಕಾಶ ಕಲ್ಪಿಸಿಕೊಡುವುದು ಹಾಗೂ ಪಾಸಾಗದೇ ಉಳಿದ ವಿಷಯಗಳನ್ನು ವರ್ಗಾವಣೆಗೊಂಡ ಕಾಲೇಜಿನಲ್ಲಿಯೇ ಮುಂದುವರೆಸಲು ಅವಕಾಶ ಕಲ್ಪಿಸಿಕೊಡುವುದು.

2. ರಾಜ್ಯದ ಉನ್ನತ ಶಿಕ್ಷಣ ಇಲಾಖೆಯಡಿಯ ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಪದವಿ ಮತ್ತು ಸ್ನಾತಕೋತ್ತರ ತರಗತಿಗಳಲ್ಲಿ ಅಧ್ಯಯನ ಮಾಡುತ್ತಿರುವ ಒಂದು ವಿಶ್ವವಿದ್ಯಾಲಯದ ಸಂಯೋಜಿತ

ಕಾಲೇಜಿನಿಂದ ರಾಜ್ಯದೊಳಗಿನ ಇನ್ನೊಂದು ಸಾರ್ವಜನಿಕ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜಿಗೆ ವಗಾವಣೆ ಬಯಸಿದಲ್ಲಿ ವಗಾವಣೆಗೆ UUCMS ತತ್ರಾಂಶ ಬಳಸಿಕೊಂಡು ವರ್ಗಾವಣೆಗೊಳ್ಳಲು ಅವಕಾಶ ಕಲ್ಪಿಸಿಕೊಡುವುದು ಹಾಗೂ ಪಾಸಾಗದೇ ಉಳಿದ ವಿಷಯಗಳನ್ನು ವರ್ಗಾವಣೆಗೊಂಡ ಕಾಲೇಜಿನಲ್ಲಿಯೇ ಮುಂದುವರೆಸಲು ಅವಕಾಶ ಕಲ್ಪಿಸಿಕೊಡುವುದು.

3. NEP-2020 - multiple entry and multiple exit ಅವಕಾಶದಡಿಯಲ್ಲಿ ನಿಗದಿತ ಕ್ರೆಡಿಟ್ ಗಳನ್ನು ಸಂಪಾದಿಸಿ ಪ್ರಥಮ ವರ್ಷ (ಎರಡು ಸೆಮಿಸ್ಟರ್) ಪೂರ್ಣಗೊಳಿಸಿ ಅಧ್ಯಯನವನ್ನು ನಿಲ್ಲಿಸಿದ ವಿದ್ಯಾರ್ಥಿಗೆ UG Certificate ನಿಗದಿತ ಕ್ರೆಡಿಟ್ ಸಂಪಾದಿಸಿ ದ್ವಿತೀಯ ವರ್ಷ (ನಾಲ್ಕು ಸೆಮಿಸ್ಟರ್) ಪೂರ್ಣಗೊಳಿಸಿ ಅಧ್ಯಯನವನ್ನು ನಿಲ್ಲಿಸಿದ ವಿದ್ಯಾರ್ಥಿಗೆ UG Diploma ಹಾಗೂ ನಿಗದಿತ ಕ್ರೆಡಿಟ್‌ಗಳನ್ನು ಸಂಪಾದಿಸಿ ತೃತೀಯ ವರ್ಷ (ಆರು ಸೆಮಿಸ್ಟರ್) ಪೂರ್ಣಗೊಳಿಸಿ ಅಧ್ಯಯನವನ್ನು ನಿಲ್ಲಿಸಿದ ವಿದ್ಯಾರ್ಥಿಗೆ Undergraduate degree ಗಳನ್ನು ನೀಡುವುದು. ನಾಲ್ಕನೇ ವರ್ಷ ಪೂರ್ಣಗೊಳಿಸಿದ ವಿದ್ಯಾರ್ಥಿಗೆ Undergraduate degree (Hons) ನೀಡುವುದು ಹಾಗೂ multiple exit option ಮುಖಾಂತರ ಹೊರಹೋದ ವಿದ್ಯಾರ್ಥಿಯು ಪ್ರಥಮ ಸೆಮಿಸ್ಟರ್‌ಗೆ ಪ್ರವೇಶ ಪಡೆದ ಏಳು ವರ್ಷಗಳೊಳಗೆ, NEP-2020 ರಡಿಯ multiple entry ಅವಕಾಶ ಬಳಸಿಕೊಂಡು ಪುನಃ ಪ್ರವೇಶ ಪಡೆದು ಅಧ್ಯಯನ ಮುಂದುವರೆಸಬಹುದು.

4. ಅಧಿಕೃತ MOOCS ವ್ಯವಸ್ಥೆಯ ಮುಖಾಂತರ ವಿದ್ಯಾರ್ಥಿಯು ಪಡೆದ ಕ್ರೆಡಿಟ್ ಪಾಯಿಂಟ್ ಗಳನ್ನು Academic Bank of Credits (ABC) ಖಾತೆಯೊಂದಿಗೆ ಸಂಯೋಜಿಸುವುದು. ಸದರಿ ಕ್ರೆಡಿಟ್ ಪಾಯಿಂಟ್‌ಗಳನ್ನು ಸದರಿ ವಿದ್ಯಾರ್ಥಿಗೆ ಸೂಕ್ತ ಪ್ರಮಾಣ ಪತ್ರಗಳನ್ನು ನೀಡಲು ಸಂಬಂಧಪಟ್ಟ ವಿಶ್ವವಿದ್ಯಾಲಯಗಳು ಪರಿಗಣಿಸುವುದು.

5. ಯುಜಿಸಿ ನಿಯಮಾವಳಿಗಳಲ್ಲಿ ಸೂಚಿಸಿರುವಂತೆ ಒಬ್ಬ ವಿದ್ಯಾರ್ಥಿಯು ಏಕಕಾಲದಲ್ಲಿ ಬಹು ಪದವಿಗಳನ್ನು ಪಡೆಯಲು ಅವಕಾಶವಿದ್ದು ವಿದ್ಯಾರ್ಥಿಯ ಹಾಜರಾತಿಯನ್ನು ಖಚಿತಪಡಿಸಿಕೊಂಡು ಎರಡು ಪದವಿಗಳಲ್ಲಿ ಅಧ್ಯಯನ ಮಾಡಲು ಅವಕಾಶ ಕಲ್ಪಿಸಿಕೊಡುವುದು.

ಮೇಲಿನ ಎಲ್ಲಾ ಅಂಶಗಳನ್ನು UUCMS ತತ್ರಾಂಶವನ್ನು ಮುಖಾಂತರ ಕಡ್ಡಾಯವಾಗಿ ನಿರ್ವಹಿಸಬೇಕೆಂದು ಸೂಚಿಸಲಾಗಿದೆ. ಸರ್ಕಾರದ ನಿರ್ದೇಶನವನ್ನು ಸಿಂಡಿಕೇಟ್ ಸಭೆಯ ಪರಾಮರ್ಶೆ ಹಾಗೂ ಅನುಮೋದನೆಗೆ ಮಂಡಿಸಿದೆ.

ಸಿಂಡಿಕೇಟ್ ತೀರ್ಮಾನ:

ರಾಷ್ಟ್ರೀಯ ಶಿಕ್ಷಣ ನೀತಿ 2020 ರ ಅನುಸಾರ ಪ್ರವೇಶ ಪಡೆದ ವಿದ್ಯಾರ್ಥಿಗಳ ವರ್ಗಾವಣೆ ಬಹು ಆಗಮನ/ ನಿರ್ಗಮನ ವ್ಯವಸ್ಥೆ ಅಡಿಯಲ್ಲಿ ವರ್ಗಾವಣೆ, ಅಧ್ಯಯನ ಸಲ್ಲಿಸಿ ಪುನಃ ಪ್ರವೇಶ ಪಡೆಯುವದು, ಕ್ರೆಡಿಟ್ ಗಳಿಕೆ ವಿಧಾನ ಕ್ರೋಢೀಕರಣ. ಮುಂತಾದ ವಿಷಯಗಳ ಕುರಿತು ಕರ್ನಾಟಕ ಸರ್ಕಾರ ಹೊರಡಿಸಿದ ಆದೇಶವನ್ನು ಸಭೆ ಗಮನಿಸಿ ಅನುಮೋದಿಸಿತು.

ವಿಷಯ ಸಂಖ್ಯೆ: 7

ವಿಷಯ:- ವಾಣಿಜ್ಯ ವಿಭಾಗದ ಪ್ರಾಧ್ಯಾಪಕರದ ಡಾ॥ ಎಂ. ಮುನಿನಾರಾಯಣಪ್ಪ ಅವರ ಮೇಲೆ ನಡೆದ ಇಲಾಖಾ ವಿಚಾರಣೆ ವರದಿಯ – ಬಗೆ.

ಉಲ್ಲೇಖ:- 1. ವಿ.ವಿ.ಆದೇಶ ಸಂಖ್ಯೆ: ಬೆಂ.ನ.ವಿ.ವಿ/ಅಮಾನತ್ತು/ಡಾ.ಎಂ. ಮುನಿನಾರಾಯಣಪ್ಪ/2021-22 ದಿ: 26.11.2021.

2. ವಿ.ವಿ. ಸಂಖ್ಯೆ:ಬೆಂ.ನ.ವಿ.ವಿ/ಸಿಬ್ಬಂದಿ1&2/320/2021-22, ದಿ: 29.12.2021.

3. ವಿ.ವಿ. ಆದೇಶ ಸಂಖ್ಯೆ: ಬೆ.ನ.ವಿ/ಡಾ.ಎಂ.ಮುನಿನಾರಾಯಣಪ್ಪ/ಪ್ರಾ.ವಾ.ವಿ/ವಿ.ಮ.ನೇ/2021-22/528 ದಿ: 22.03.2022

4. ವಿಚಾರಣಾಧಿಕಾರಿಗಳ ವಿಚಾರಣಾ ವರದಿ ದಿ:03-01-2023.

***ಪರಾಮರ್ಶಕ ಟಿಪ್ಪಣಿ:***

ವಾಣಿಜ್ಯ ವಿಭಾಗದ ಪ್ರಾಧ್ಯಾಪಕರಾದ ಡಾ॥ ಎಂ. ಮುನಿನಾರಾಯಣಪ್ಪ ಅವರು ವಾಣಿಜ್ಯ ವಿಭಾಗದ ಮುಖ್ಯಸ್ಥರು, ಡೀನರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಂದರ್ಭದಲ್ಲಿ ತಮ್ಮ ಮಾರ್ಗದರ್ಶನದಲ್ಲಿ ಸಂಶೋಧನೆ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಾನಸಿಕ ಕಿರುಕುಳ ನೀಡುತ್ತಿರುವ ದೂರುಗಳನ್ನು ಆಧರಿಸಿ ಉಲ್ಲೇಖ (1) ರ ಆದೇಶದಂತೆ ಅಮಾನತ್ತುಗೊಳಿಸಿ ಆದೇಶ ಹೊರಡಿಸಲಾಗಿತ್ತು. ದಿನಾಂಕ: 17-11-2021 ರಂದು ಜರುಗಿದ ಸಿಂಡಿಕೇಟ್ ಸಭೆಯ ತೀರ್ಮಾನದ ಪ್ರಕಾರ ಉಲ್ಲೇಖ (2)ರ ಆದೇಶದಲ್ಲಿ ವಿಚಾರಣೆಯನ್ನು ಕಾಯ್ದಿರಿಸಿ ಕರ್ತವ್ಯಕ್ಕೆ ಹಾಜರಾಗಲು ಸೂಚಿಸಲಾಗಿತ್ತು. ಶ್ರೀ ಬಿ. ಶಿವಲಿಂಗೇ ಗೌಡ, ನಿವೃತ್ತ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಇವರನ್ನು ವಿಚಾರಣೆ ನಡೆಸಲು ಉಲ್ಲೇಖ (3) ರ ಆದೇಶದಲ್ಲಿ ವಿಚಾರಣಾಧಿಕಾರಿಯಾಗಿ ನೇಮಿಸಲಾಗಿದೆ. ವಿಶ್ವವಿದ್ಯಾನಿಲಯದ Classification, Conduct and Appeal ಪರಿನಿಯಮಗಳ ಅನುಸಾರ ಆಪಾದನೆಗಳಿಗೆ ನಿಯಮಿತಿಗಳಂತೆ ವಿಚಾರಣೆಯನ್ನು ನಡೆಸಿ ದಿನಾಂಕ: 03-01-2023 ರಂದು ವಿಚಾರಣಾಧಿಕಾರಿಗಳು ವಿಚಾರಣೆಯ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುತ್ತಾರೆ.

ವಿಶ್ವವಿದ್ಯಾನಿಲಯದ (C.C.A) ಪರಿನಿಯಮಗಳ ಅನುಸಾರ ಡಾ॥ ಎಂ. ಮುನಿನಾರಾಯಣಪ್ಪ, ಪ್ರಾಧ್ಯಾಪಕರು, ವಾಣಿಜ್ಯ ವಿಭಾಗರವರ ಮೇಲೆ ಹೊರೆಸಿರುವ ಆಪಾದನೆಯನ್ನು ಗಣನೆಗೆ ತೆಗೆದುಕೊಂಡು ವಿಚಾರಣಾಧಿಕಾರಿಗಳು ವಿಧಿವತ್ತಾಗಿ ವಿಚಾರಣೆ ನಡೆಸಿ, ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದ ವಿಚಾರಣಾ ವರದಿಯನ್ನು ಶಿಸ್ತು ಪರಿನಿಯಮಗಳಲ್ಲಿ ವಿಧಿಸಿರುವ ದಂಡನೆಯ ವಿವರಗಳನ್ನು ಶಿಸ್ತು ಪ್ರಾಧಿಕಾರವಾದ, ಸಿಂಡಿಕೇಟ್ ಪ್ರಾಧಿಕಾರದ ಮುಂದೆ ಪರಿಗಣನೆ ಮತ್ತು ನಿರ್ಧಾರಕ್ಕಾಗಿ ಮಂಡಿಸಲಾಗಿದೆ.

ವಿಶ್ವವಿದ್ಯಾನಿಲಯದ 28.5 ಪರಿನಿಯಮಗಳಲ್ಲಿ (C.C.A Statutes) ಸದರಿ ವಿಷಯಕ್ಕೆ ಅನ್ವಯಿಸುವಂತಹ ಶಿಸ್ತು ದಂಡನೆಗಳ ವಿವರಗಳನ್ನು ಈ ಕೆಳಗೆ ನಮೂದಿಸಲಾಗಿದೆ.

ವಿಶ್ವವಿದ್ಯಾನಿಲಯದ 28.5 ಪರಿನಿಯಮಗಳ ಪ್ರಕಾರ ಆಪಾದನೆಗಳು ರುಜುವಾದಲ್ಲಿ ವಿಧಿಸಬಹುದಾದ ದಂಡನೆಗಳು:

i. Censure
ii. (a) With holding of increments without cumulative or with cumulative or promotions.
iii. Reduction to a lower stage for a specified period.
iv. Reduction or a lower scale of pay.
   (a) Reduction in seniority and pay.
   (b) Conditions of restoration in seniority or pay.
v. Compulsory retirement.
vi. Removal from service without disqualification to future employment.
   Dismissal from University, disqualifying from future employment

<u>ಸಿಂಡಿಕೇಟ್ ತೀರ್ಮಾನ:</u>

ವಿಚಾರಣಾಧಿಕಾರಿಗಳು ನೀಡಿದ ವಿಚಾರಣಾ ವರದಿಯನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಯಿತು. ವಿಚಾರಣಾ ವರದಿಯಲ್ಲಿ ಆರೋಪಿತ ಪ್ರಾಧ್ಯಾಪಕರ ವಿರುದ್ಧ ಮಾಡಲಾದ 4 ಆಪಾದನೆಗಳಲ್ಲಿ 3 ಆಪಾದನೆಗಳು ರುಜುವಾತಾಗಿವೆ ಎಂದು ತಿಳಿಸಲಾಗಿದೆ. ಸಿಂಡಿಕೇಟ್ ಸಭೆ ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯನ್ನು ಒಪ್ಪಿಕೊಳ್ಳಲು ತೀರ್ಮಾನಿಸಿತು. ಆಪಾದಿತ ಪ್ರಾಧ್ಯಾಪಕರಾದ ಡಾ. ಎಂ. ಮುನಿನಾರಾಯಣಪ್ಪ ವಾಣಿಜ್ಯ ವಿಭಾಗ ಇವರ ವಿರುದ್ಧ ಮಾಡಲಾದ 4 ಆಪಾದನೆಗಳಲ್ಲಿ 3 ಆಪಾದನೆಗಳು ರುಜುವಾತು ಆಗಿರುವುದರಿಂದ ವಿಶ್ವವಿದ್ಯಾನಿಲಯ ಅಳವಡಿಸಿಕೊಂಡಿರುವ ಬೆಂಗಳೂರು ವಿಶ್ವವಿದ್ಯಾಲಯದ CCA ಪರಿನಿಯಮದ **28.5 (iii) (a)** ಅಡಿಯಲ್ಲಿ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮವಿಲ್ಲದೆ ತಡೆಹಿಡಿಯುವ (**Withholding of One Annual Increment without cumulative effect**) ದಂಡನೆಯನ್ನು ವಿಧಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಇವರ ವಿರುದ್ಧ **ICC** ವಿಚಾರಣೆ ಬಾಕಿ ಇರುವುದರಿಂದ, ಅವರಿಗೆ ಈ ಹಿಂದೆ ನಿರ್ಧರಿಸಿದಂತೆ ಯಾವುದೇ ಜವಾಬ್ದಾರಿ ಸ್ಥಾನಗಳನ್ನು ನೀಡದೇ ಇರಲು ಸಿಂಡಿಕೇಟ್ ಸಭೆ ಸರ್ವಾನುಮತದಿಂದ ಅನುಮೋದನೆ ನೀಡಿತು.

ಪರಿನಿಯಮಗಳ ನಿಯಮ **28.10** ಪ್ರಕಾರ ಸಂಬಂಧಿಸಿದ ಸಿಬ್ಬಂದಿಯ ವಿರುದ್ಧ ಉದ್ದೇಶಿಸಿರುವ ಶಿಸ್ತು ಕ್ರಮದ ಕುರಿತು ಲಿಖಿತ ಸೂಚನೆ ನೀಡಿ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ: 8

ವಿಷಯ: ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ, ಜೀವರಸಾಯನಶಾಸ್ತ್ರ ಹಾಗೂ ವಾಣಿಜ್ಯ ವಿಭಾಗಕ್ಕೆ ಮುಖ್ಯಸ್ಥರನ್ನು ನೇಮಕ ಮಾಡಿ ಆದೇಶ ಹೊರಡಿಸಿರುವ ಕ್ರಮದ ಘಟನೋತ್ತರ ಅನುಮೋದನೆ ಬಗ್ಗೆ.

ಉಲ್ಲೇಖ:
1. ಸಂಖ್ಯೆ: ಬೆ.ನ.ವಿ/ಸಿಬ್ಬಂದಿ-1&2/ಅ.ನೇಮಕ/2020-21, ದಿನಾಂಕ: 25.02.2021.
2. ಸಂಖ್ಯೆ:ಬೆಂ.ನ.ವಿ/ಸಿಬ್ಬಂದಿ/ಅಮಾನತ್ತು/ಡಾ:ಎಂ.ಮುನಿನಾರಾಯಣಪ್ಪ/233/2021-22, ದಿನಾಂಕ: 30.11.2021.
3. ಸಂಖ್ಯೆ: ಬೆನವಿ/ಸಿಬ್ಬಂದಿ1&2/320/2021, ದಿನಾಂಕ: 29.12.2021.
4. ಸಂಖ್ಯೆ:ಬಿಸಿಯು/ಸಿಬ್ಬಂದಿ/ಮು.ನೇ/2022.23/1032, ದಿನಾಂಕ: 28.02.2023.
5. ಸಂಖ್ಯೆ:ಬಿಸಿಯು/ಸಿಬ್ಬಂದಿ/ವಿ.ಮು.ನೇ/2022.23/1034, ದಿನಾಂಕ: 28.02.2023.
6. ಸಂಖ್ಯೆ:ಬಿಸಿಯು/ಸಿಬ್ಬಂದಿ/ಮು.ನೇ/2022.23/1033, ದಿನಾಂಕ: 01.03.2023.

**ಪರಾಮರ್ಶಕ ಟಿಪ್ಪಣಿ:**

ಉಲ್ಲೇಖ (1) ಮತ್ತು (2) ರ ಆದೇಶದ ಪ್ರಕಾರ ವಿಶ್ವವಿದ್ಯಾನಿಲಯದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ, ಜೀವರಸಾಯನಶಾಸ್ತ್ರ ಹಾಗೂ ವಾಣಿಜ್ಯ ವಿಭಾಗಕ್ಕೆ ಕಲಂ (1) ರಲ್ಲಿರುವ ಪ್ರಾಧ್ಯಾಪಕರನ್ನು ವಿಭಾಗದ ಮುಖ್ಯಸ್ಥರಾಗಿ ನೇಮಕ ಮಾಡಿ ಆದೇಶ ಹೊರಡಿಸಲಾಗಿರುತ್ತದೆ. ಈ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರ ಅವಧಿಯು ದಿನಾಂಕ: 25.02.2023 ರಂದು ಮುಕ್ತಾಯಗೊಂಡಿರುತ್ತದೆ.

ಈ ವಿಭಾಗಗಳಿಗೆ ಉಲ್ಲೇಖ (4) ರಿಂದ (6) ರ ಆದೇಶಗಳ ಪ್ರಕಾರ ಬೆಂಗಳೂರು ವಿಶ್ವವಿದ್ಯಾನಿಲಯದ ಅಧಿಸೂಚನೆ ದಿನಾಂಕ: 11.11.1991ರ ಪರಿನಿಯಮದಂತೆ ದಿನಾಂಕ: 27.02.2023 ರಿಂದ ಪೂರ್ವಾನ್ವಯಗೊಳಿಸಿ, 2 ವರ್ಷದ ಅವಧಿಗೆ ಅಥವಾ ವಯೋನಿವೃತ್ತಿ ಹೊಂದುವವರೆಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಆ ಅವಧಿಗೆ ಈ ಕೆಳಕಂಡ ಪ್ರಾಧ್ಯಾಪಕರನ್ನು ಅವರ ಹೆಸರಿನ ಮುಂದೆ ಸೂಚಿಸಿರುವ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರನ್ನಾಗಿ ನೇಮಕ ಮಾಡಿ ಆದೇಶ ಹೊರಡಿಸಲಾಗಿದೆ.

| ಕ್ರ.ಸ | ಹೆಸರು | ಮುಖ್ಯಸ್ಥರನ್ನಾಗಿ ಕಾರ್ಯನಿರ್ವಹಿಸುತ್ತಿರುವ ವಿಭಾಗ | ಮುಖ್ಯಸ್ಥರಾಗಿ ನೇಮಕಗೊಂಡ ದಿನಾಂಕ: |
|---|---|---|---|
| (1) | (2) | (3) | (4) |
| 1. | ಡಾ॥ ಎನ್.ನರಸಿಂಹ ಮೂರ್ತಿ, ಪ್ರಾಧ್ಯಾಪಕರು | ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ | 26.02.2021 |
| 2. | ಡಾ॥ ಎಂ. ಮುನಿರಾಜು, ಪ್ರಾಧ್ಯಾಪಕರು | ವಾಣಿಜ್ಯ ವಿಭಾಗ | 30.11.2021 |
| 3. | ಡಾ॥ ವಿ.ಆರ್. ದೇವರಾಜ್ ಪ್ರಾಧ್ಯಾಪಕರು | ಜೀವರಸಾಯನಶಾಸ್ತ್ರ | 26.02.2021 |

ಮೇಲಿನ ವಿಷಯವನ್ನು ಸಿಂಡಿಕೇಟ್ ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

**ಸಿಂಡಿಕೇಟ್ ತೀರ್ಮಾನ:**

**ಕೈಗೊಂಡ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಲು ಸಭೆ ತೀರ್ಮಾನಿಸಿತು.**

ವಿಷಯ ಸಂಖ್ಯೆ: 9

ವಿಷಯ ಸಂಖ್ಯೆ: ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ ತಾತ್ಕಾಲಿಕವಾಗಿ ವಿವಿಧ ಆಡಳಿತ/ವಿಭಾಗಗಳಲ್ಲಿ ಸಂಚಿತ ಸಂಭಾವನೆಯಲ್ಲಿ ಸೇವೆಯನ್ನು ಪಡೆಯುತ್ತಿರುವ ನಿವೃತ್ತ ನೌಕರರು/ತಾತ್ಕಾಲಿಕ ನೌಕರರ ಸಂಭಾವನೆ ಹೆಚ್ಚಳ ಮಾಡುವ ಬಗ್ಗೆ.

**ಪರಾಮರ್ಶಕ ಟಿಪ್ಪಣಿ**

ವಿಶ್ವವಿದ್ಯಾನಿಲಯದ ಆದೇಶ ದಿನಾಂಕ: 30.12.2022 ರ ಪ್ರಕಾರ ಸಂಚಿತ ಸಂಭಾವನೆಯಲ್ಲಿ ವಿವಿಧ ವೃಂದದ ಹುದ್ದೆಗಳಲ್ಲಿ ಆಡಳಿತ/ವಿಭಾಗಗಳಲ್ಲಿ ಸೇವೆ ಪಡೆಯಲಾಗುತ್ತಿರುವ ನೌಕರರು ದೈನಂದಿನ ದಿನಸಿ ಬೆಲೆಗಳ ಹೆಚ್ಚಳ/ಮನೆ ಬಾಡಿಗೆ/ಸಾರಿಗೆ ವೆಚ್ಚ ಹಾಗೂ ಇತ್ಯಾದಿ ಬೆಲೆ ಏರಿಕೆಯದಿಂದಾಗಿ ಪ್ರಸ್ತುತ ಪಡೆಯುತ್ತಿರುವ ಸಂಭಾವನೆಯಲ್ಲಿ ನಗರದಲ್ಲಿ ಜೀವನ ನಡೆಸುವುದು ಅತ್ಯಂತ ಕಷ್ಟವಾಗಿರುವುದರಿಂದ ಸಂಭಾವನೆ ಮೊತ್ತವನ್ನು ಹೆಚ್ಚಿಸುವಂತೆ ಕೋರಿ ದಿನಾಂಕ: 31.12.2022 ರಲ್ಲಿ ಮನವಿ ಸಲ್ಲಿಸಿರುತ್ತಾರೆ.

ತಾತ್ಕಾಲಿಕ ಸಿಬ್ಬಂದಿಗಳ ಮನವಿಯ ಕುರಿತು ಪರಿಶೀಲಿಸಿ ವರದಿ ಸಲ್ಲಿಸಲು ಮಾನ್ಯ ಕುಲಪತಿಗಳು ಸಮಿತಿಯನ್ನು ರಚಿಸಿರುತ್ತಾರೆ. ಅದರಂತೆ, ದಿನಾಂಕ: 28-02-2023 ರಂದು ಜರುಗಿದ ತಾತ್ಕಾಲಿಕ ನೌಕರರ ಸಂಭಾವನೆ ಹೆಚ್ಚಳ ಕುರಿತು ರಚಿಸಲಾದ ಸಮಿತಿಯು ತಾತ್ಕಾಲಿಕ ಸಿಬ್ಬಂದಿಗಳ ಸಂಭಾವನೆ ಹೆಚ್ಚಳ ಕುರಿತಂತೆ ಕೂಲಂಕುಷವಾಗಿ ಪರಿಶೀಲಿಸಿ, ಸರ್ಕಾರದಿಂದ ಮಂಜೂರಾದ ಹುದ್ದೆಗಳೆದುರು ಸಮಾನಾಂತರವಾಗಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ನೌಕರರಿಗೆ ಕೆಳಗಿನಂತೆ ಕಾಲಂ(B) ನಲ್ಲಿ ತೋರಿಸಿರುವಂತೆ ಸಂಭಾವನೆ ಹೆಚ್ಚಳ ಮಾಡಲು ಸಮಿತಿಯು ಸರ್ವಾನುಮತದಿಂದ ಶಿಫಾರಸ್ಸು ಮಾಡಿರುತ್ತದೆ.

ಪ್ರಸ್ತುತ ವಿಶ್ವವಿದ್ಯಾನಿಲಯದಲ್ಲಿ ವಿವಿಧ ಆಡಳಿತ/ವಿಭಾಗಗಳಲ್ಲಿ ಸರ್ಕಾರದಿಂದ ಮಂಜೂರಾದ ಹುದ್ದೆಗಳೆದುರು ಸಮಾನಾಂತರವಾಗಿ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ಕಾಲಂ (A)ನಲ್ಲಿ ತೋರಿಸಿರುವಂತೆ ನೀಡಲಾಗುತ್ತಿದೆಹಾಗೂ ಸಮಿತಿಯುಶಿಫಾರಸ್ಸು ಮಾಡಿರುವ ಸಂಭಾವನೆಯ ಕಾಲಂ (B) ನಲ್ಲಿ ತೋರಿಸಿದ್ದು, ವಿವರ ಈ ಕೆಳಕಂಡಂತಿದೆ.

| ಕ್ರ.ಸಂ | ಹುದ್ದೆಯ ಹೆಸರು | ಪ್ರಸ್ತುತ ನೀಡುತ್ತಿರುವ ಸಂಭಾವನೆ | ಸಮಿತಿಯು ಶಿಫಾರಸ್ಸು ಮಾಡಿರುವ ಸಂಭಾವನೆ |
|---|---|---|---|
| | | (A) | (B) |
| 1. | ತಾಂತ್ರಿಕ ಸಹಾಯಕ ಹುದ್ದೆ ಸಮಾನಾಂತರ | ರೂ. 40,000/-<br>ರೂ. 32,000/- | ರೂ. 42,000/-<br>ರೂ. 34,000/- |
| 2. | ಲೆಕ್ಕ ಸಹಾಯಕ ಹುದ್ದೆ ಸಮಾನಾಂತರ | ರೂ.30,350/- | ರೂ. 32,000/- |
| 3. | ಗ್ರೂಪ್ ಸಿ ಸಮಾನಾಂತರ ಹುದ್ದೆ | | • ಒಂದು ವರ್ಷಕ್ಕಿಂತ ಹೆಚ್ಚು ಅನುಭವ ಹೊಂದಿರುವ ನೌಕರರಿಗೆ ರೂ. 25,000/-<br>• ಒಂದು ವರ್ಷಕ್ಕಿಂತ ಕಡಿಮೆ ಅನುಭವ ಹೊಂದಿರುವ ನೌಕರರಿಗೆ ರೂ. 22,000/- |
| | ಗಣಕಯಂತ್ರ ಬೆರಳಚ್ಚುಗಾರರು/ಕಛೇರಿ ಕೆಲಸ | ರೂ. 18,000/- | |
| | ಕಛೇರಿ ಕೆಲಸ/ಪ್ರಯೋಗಾಲಯ ಸಹಾಯಕರು | ರೂ. 16,500/- | |
| 4. | ಗ್ರೂಪ್ ಡಿ ಸಮಾನಾಂತರ ಹುದ್ದೆ (ಎಲೆಕ್ಟ್ರಿಷಿಯನ್) | ರೂ. 21,000/- | ರೂ. 23,000/- |

| | | | |
|---|---|---|---|
| 5. | ಗ್ರೂಪ್ ಡಿ ಸಮಾನಾಂತರ ಹುದ್ದೆ | ರೂ. 16,500/–, ರೂ. 16,000/– ಹಾಗೂ ರೂ. 13,000/– | • ಒಂದು ವರ್ಷಕ್ಕಿಂತ ಹೆಚ್ಚು ಅನುಭವ ಹೊಂದಿರುವ ನೌಕರರಿಗೆ ರೂ. 21,000/–<br>• ಒಂದು ವರ್ಷಕ್ಕಿಂತ ಕಡಿಮೆ ಅನುಭವ ಹೊಂದಿರುವ ನೌಕರರಿಗೆ ರೂ. 20,000/– |
| 6. | ವಾಹನ ಚಾಲಕರು | ರೂ. 21,000/– | ರೂ. 25,000/– |
| 7. | ಗ್ರೂಪ್ ಡಿ ಹುದ್ದೆ (ನಿವೃತ್ತ ನೌಕರರು)<br>1. ಆನಂದ್ ಪೂಜಾರಿ<br>2. ಸ್ವಾಮಿನಾಥನ್<br>3. ಕಾಂತರಾಜು | <br>ರೂ. 15,000/–<br>ರೂ. 15,000/–<br>ರೂ. 10,000/– | <br>ರೂ. 20,000/–<br>ರೂ. 20,000/–<br>ರೂ. 15,000/– |

<u>ಈ ಪ್ರಸ್ತಾವನೆಗೆ ಆವಶ್ಯಕವಿರುವ ಅನುದಾನದ ವಿವರ.</u>

2022–23ರ ಆಯವ್ಯಯಗಳ ಲೆಕ್ಕಶೀರ್ಷಿಕೆ 4–09–022–065ರಲ್ಲಿ ನಿವೃತ್ತ ಅಧಿಕಾರಿ/ತಾತ್ಕಾಲಿಕ ನೌಕರರ ಸಂಭಾವನೆಗಾಗಿ ರೂ. 250.00 ಲಕ್ಷಗಳನ್ನು ಕಾಯ್ದಿರಿಸಲಾಗಿದೆ. ಈ ಅನುದಾನದಲ್ಲಿ ಈಗಾಗಲೇ ನಿವೃತ್ತ ಅಧಿಕಾರಿ/ತಾತ್ಕಾಲಿಕ ನೌಕರರಿಗೆ ನೀಡಲಾಗಿರುವ ಸಂಭಾವನೆಯ ವೆಚ್ಚ ಹಾಗೂ ಸಮಿತಿಯು ಶಿಫಾರಸ್ಸಿನ ಮೇರೆಗೆ 2023–24ನೇ ಸಾಲಿನಿಂದ ಸಂಭಾವನೆ ಹೆಚ್ಚಳ ಮಾಡಿದ್ದಲ್ಲಿ ಆಗುವ ವೆಚ್ಚವನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

- 2022–23 ರ ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ (ನಿವೃತ ಅಧಿಕಾರಿ/ತಾತ್ಕಾಲಿಕ ನೌಕರರ ಸಂಭಾವನೆ) – 250.00
- ಇಲ್ಲಿಯವರೆಗೆ ಖರ್ಚು – 167.00
- ಉಳಿಕೆ – 83.00

---

- 2023–24 ರ ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ – 300.00
- ಸಮಿತಿಯ ಶಿಫಾರಸ್ಸಿನ ಮೇರೆಗೆ ಅಂದಾಜಿಸಲಾಗಿರುವ ವೆಚ್ಚ (ನಿವೃತ ಅಧಿಕಾರಿ/ತಾತ್ಕಾಲಿಕ ನೌಕರರ ಸಂಭಾವನೆ) – 220.00

ದಿನಾಂಕ: 31.12.2022 ರಂದು ತಾತ್ಕಾಲಿಕ ನೌಕರರು ಸಲ್ಲಿಸಿರುವ ಮನವಿಯ ಮೇರೆಗೆ ಹಾಗೂ ಸಮಿತಿಯು ಶಿಫಾರಸ್ಸು ಮಾಡಿರುವಂತೆ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿರುವ 59 ಸಿಬ್ಬಂದಿಗಳಿಗೆ ಸಂಭಾವನೆ ಹೆಚ್ಚಳ ಮಾಡುವ ಕುರಿತು ಸಿಂಡಿಕೇಟ್ ಪರಿಗಣನೆಗೆ ಹಾಗೂ ಅನುಮೋದನೆಗೆ ಮಂಡಿಸಿದೆ.

*<u>ವಿವರಣೆ:</u>*

ತಾತ್ಕಾಲಿಕ ಸಿಬ್ಬಂದಿಗಳ ಸಂಭಾವನೆ ಹೆಚ್ಚಿಸುವ ಕುರಿತು ರಚಿಸಲಾದ ಸಮಿತಿಯ ವರದಿಯು ಸಭೆ ಅವಲೋಕಿಸಿತು. ಸಭಾಧ್ಯಕ್ಷರು ವಿವರಗಳನ್ನು ನೀಡಿ ತಾತ್ಕಾಲಿಕ ನೌಕರರು ಬೆಳೆ ದುಬಾರಿಯಾಗಿರುವ

ಹಿನ್ನೆಲೆಯಲ್ಲಿ ಹಾಗೂ ಕೆಲವು ನೌಕರರು ವಿಶ್ವವಿದ್ಯಾನಿಲಯದ ಆರಂಭದಿಂದಲೂ ಕೆಲಸ ನಿರ್ವಹಿಸುತ್ತಿದ್ದು, ಸೇವಾ ಅನುಭವ ಹಾಗೂ ಹಿರಿತನದ ಆಧಾರದ ಮೇಲೆ ನಿಶ್ಚಿತ ಸಂಭಾವನೆ ಹೆಚ್ಚಳ ಮಾಡಲು ಕೋರಿದ್ದು, ಅವರ ಮನವಿಯನ್ನು ಪರಿಶೀಲಿಸಲು ಸಮಿತಿಯನ್ನು ರಚಿಸಲಾಗಿದೆ. ಸಮಿತಿ ಸಭೆ ಜರುಗಿಸಿ ವರದಿ ಸಲ್ಲಿಸಿರುತ್ತದೆ. ವಿಶ್ವವಿದ್ಯಾನಿಲಯ, ಹೊಸ ಘಟಕ ಕಾಲೇಜು, ಯುಜಿ ಹಾಗೂ ಪಿಜಿ ಕೋರ್ಸುಗಳನ್ನು ಸಿಂಡಿಕೇಟ್ ಹಾಗೂ ಸರ್ಕಾರದ ಅನುಮೋದನೆ ಪಡೆದು ಆರಂಭಿಸಿದ್ದು, ಹೆಚ್ಚಿನ ಸಿಬ್ಬಂದಿಗಳ ನೇಮಕಕ್ಕೆ ಅನುಮತಿ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಕಾರ್ಯಭಾರದ ಹೆಚ್ಚಳದಿಂದಾಗಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ತಾತ್ಕಾಲಿಕ ಸಿಬ್ಬಂದಿಗಳನ್ನು ನೇಮಿಸುವ ತುರ್ತು ಅಗತ್ಯವಿರುತ್ತದೆ. ವಿಶೇಷವಾಗಿ ಯು.ಯು.ಸಿ.ಎಂ.ಎಸ್ ನಿರ್ವಹಣಕ್ಕೆ ಹೆಚ್ಚು ಸಿಬ್ಬಂದಿ ಅಗತ್ಯವಿದೆ. ಬರುವ ದಿವಸಗಳಲ್ಲಿ ಸಿಬ್ಬಂದಿಗಳ ಸಂಖ್ಯೆ ಹೆಚ್ಚಾದಾಗ ಸಂಭಾವನೆ ಪಾವತಿ ಕುರಿತಂತೆ ವಿಶ್ವವಿದ್ಯಾನಿಲಯದ ಆರ್ಥಿಕ ಹೊರೆ ಅಧಿಕಗೊಳ್ಳುತ್ತದೆ. 2021 ರಲ್ಲಿ ಸದರಿ ತಾತ್ಕಾಲಿಕ ಸಿಬ್ಬಂದಿಗಳಿಗೆ ರೂ. 3000/- ಗಳ ಸಂಭಾವನೆಯನ್ನು ಹೆಚ್ಚಿಸಿ ಆದೇಶ ನೀಡಲಾಗಿದೆ. ಈಗ ರೂ.8,500/- ಗಳನ್ನು ಹೆಚ್ಚಿಸಲು ವರದಿಯಲ್ಲಿ ಪ್ರಸ್ತಾಪಿಸಲಾಗಿದೆ. ಕಾರಣ ಕಳೆದ ಸಲ ಪರಿಗಣಿಸಿದಂತೆ 1 ವರ್ಷಕ್ಕಿಂತ ಅಧಿಕ ಸೇವೆ ಸಲ್ಲಿಸಿರುವವರಿಗೆ ರೂ. 3000-4000 ವರೆಗೆ ಸಂಭಾವನೆ ಹೆಚ್ಚು ಮಾಡುವುದು ಸೂಕ್ತವೆಂದು ತಿಳಿಸಿದರು. ಹೊಸದಾಗಿ ಸೇವೆಗೆ ಸೇರಿದವರಿಗೆ ಈ ಹೆಚ್ಚಳ ಅನ್ವಯವಾಗುವದಿಲ್ಲ ಎಂದು ತಿಳಿಸಿದರು.

ಸಮಿತಿ ಸದಸ್ಯರಾದ ಶ್ರೀ ಸಮರ್ಥ ಮುನಿರಾಜು ರವರು ಮಾನ್ಯ ಕುಲಪತಿಯವರು ಹೇಳುತ್ತಿರುವ ವಿಶ್ವವಿದ್ಯಾನಿಲಯದ ಮೇಲೆ ಆರ್ಥಿಕ ಒತ್ತಡ ವಾಸ್ತವವಾಗಿದ್ದರೂ ಕೂಡ ಪ್ರಸ್ತುತ ಕಾಲಮಾನದಲ್ಲಿ ಬೆಂಗಳೂರು ನಗರದ ಜೀವನ ನಿರ್ವಹಣೆಯ ವೆಚ್ಚವನ್ನು ಪರಿಗಣಿಸಿ ರೂ.25,000/- ಸಂಭಾವನೆ ನಿಗದಿಪಡಿಸಲು ಸಮಿತಿ ಶಿಫಾರಸ್ಸು ಮಾಡಿದೆ ಎಂದು ತಿಳಿಸಿದರು. ಸಿಬ್ಬಂದಿಗಳ ಹಿತದೃಷ್ಟಿಯಿಂದ ಹಾಗೂ ವಿಶ್ವವಿದ್ಯಾನಿಲಯದ ಹಿತಾಸಕ್ತಿ ಗಮನಿಸಿ ಈ ಕುರಿತು ಮಾನ್ಯ ಕುಲಪತಿಗಳು ಸೂಕ್ತ ತೀರ್ಮಾನ ಕೈಗೊಳ್ಳಬೇಕೆಂದು ಸಿಂಡಿಕೇಟ್ ಸಭೆ ಅಭಿಪ್ರಾಯಪಟ್ಟಿತು.

<u>ಸಿಂಡಿಕೇಟ್ ತೀರ್ಮಾನ:</u>

**ತಾತ್ಕಾಲಿಕ ಸಿಬ್ಬಂದಿಗಳ ಸಂಭಾವನೆ ಹೆಚ್ಚಳಕ್ಕೆ ಸಿಂಡಿಕೇಟ್ ಸಭೆ ಸರ್ವಾನುಮತದ ಅನುಮೋದನೆ ನೀಡಿ ಹೆಚ್ಚಿಸಬೇಕಾದ ಸಂಭಾವನೆ ಮೊತ್ತವನ್ನು ನಿಗದಿಪಡಿಸಲು ಮಾನ್ಯ ಕುಲಪತಿಗಳ ವಿವೇಚನೆಗೆ ಬಿಡಲು ಸಭೆ ತೀರ್ಮಾನಿಸಿತು.**

ವಿಷಯ ಸಂಖ್ಯೆ: 10

ವಿಷಯ: ಬೆಂಗಳೂರಿನ ಸಂತ ಜೋಸೆಫ್ ಸ್ವಾಯತ್ತ ಸಂಜೆ ಮಹಾವಿದ್ಯಾಲಯವನ್ನು ಸ್ವಯಂ ಮುಚ್ಚುವ ಪ್ರಸ್ತಾವನೆಯನ್ನು ಪರಿಗಣಿಸಲು ರಚಿಸಿದ ತಜ್ಞ ಸಮಿತಿಯ ವರದಿಯನ್ನು ಹಾಗೂ ಅದರ ಮೇಲಿನ ವಿದ್ಯಾವಿಷಯಕ ಪರಿಷತ್ ಮಾಡಿದ ಶಿಫಾರಸ್ಸುಗಳನ್ನು ಪರಿಗಣಿಸುವ ಕುರಿತು.

ಉಲ್ಲೇಖ:
1. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 65
2. ವಿಶ್ವವಿದ್ಯಾನಿಲಯದ ಅಧಿಸೂಚನೆ ಸಂಖ್ಯೆ: BCU/Aca/Auto-Closure/150/2022-23 Date: 06.08.2022
3. ಸಮಿತಿಯು ಮಹಾವಿದ್ಯಾಲಯಕ್ಕೆ ದಿನಾಂಕ: 12.10.2022 ರಂದು ಭೇಟಿನೀಡಿ ಸಲ್ಲಿಸಿದ ವರದಿ.
4. ವಿದ್ಯಾವಿಷಯಕ ಪರಿಷತ್ ಅನುಮೋದನೆ ದಿನಾಂಕ: 08.02.2023

.....

***ಪರಮಾರ್ಶಕ ಟಿಪ್ಪಣಿ:***

ಬೆಂಗಳೂರಿನ ಸಂತ ಜೋಸೆಫ್ ಸ್ವಾಯತ್ತ ಸಂಜೆ ಮಹಾವಿದ್ಯಾಲಯವನ್ನು ಸ್ವಯಂ ಪ್ರೇರಿತವಾಗಿ ಮುಚ್ಚಲು ಸಲ್ಲಿಸಿದ ಪ್ರಸ್ತಾವನೆಯನ್ನು ದಿನಾಂಕ: 18.06.2022ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗಿ ಸದರಿ ಸಭೆ ಮಹಾವಿದ್ಯಾಲಯದ ಸ್ವಯಂ ಪ್ರೇರಿತವಾಗಿ ಮುಚ್ಚುವ ಪ್ರಸ್ತಾವನೆಯನ್ನು ಪರಿಗಣಿಸಿ ವರದಿ ಪಡೆಯಲು ಕುಲಪತಿಗಳಿಗೆ ಅಧಿಕಾರ ನೀಡಲಾಗಿತ್ತು ಅದರಂತೆ, ಮಾನ್ಯ ಕುಲಪತಿಗಳ ನಿರ್ದೇಶನದ ಮೇರೆಗೆ ಉಲ್ಲೇಖ (2)ರ ಅಧಿಸೂಚನೆಯಲ್ಲಿ ಡಾ. ವಿ.ಆರ್ ದೇವರಾಜ್, ಡೀನರು ವಿಜ್ಞಾನ ನಿಕಾಯ, ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿ ವರದಿ ಸಲ್ಲಿಸಲು ಸೂಚಿಸಲಾಗಿತ್ತು. ಸದರಿ ಸಮಿತಿ ದಿನಾಂಕ 12.10.2022 ರಂದು ಮಹಾವಿದ್ಯಾಲಯಕ್ಕೆ ಭೇಟಿ ನೀಡಿ ವರದಿಯನ್ನು ಸಲ್ಲಿಸಿರುತ್ತದೆ.

ವರದಿಯ ಸಾರಾಂಶ ಮತ್ತು ಶಿಫಾರಸ್ಸುಗಳು ಕೆಳಗಿನಂತಿವೆ.

Upon verification of the connected documents and interaction with the Management and Principal, the committee has made the following observations:

1. The College has not admitted students for the year 2022-23 in respect of the courses offered by the college.
2. As per the extracts provided by the Principal the following is the strength of students in different Courses:

| Course | 2018-19 Batch * | 2019-20 Batch * | 2020-21 Batch (Final year degree) (i) | 2021-22 'II Degree' (ii) |
|---|---|---|---|---|
| B.A | 16 | 48 | 55 | 112 |
| B.Com | 34 | 119 | 182 | 206 |
| BBA | 06 | 17 | 61 | 54 |
| BCA | 16 | 21 | 56 | 63 |
| M.Com | 01 | 04 | - | 21 |
| MA Journalism | - | 02 | - | - |
| MA English | - | - | - | 07 |
| **Total** | **73** | **211** | **354** | **463** |

* Students who have back-log in different semesters

i) Students who are in final year degree ii) Students who are in second year degree

3. The Course wise details and the students admitted for each course and each semester for the years 2018-21 and 2021-22 has been provided by the college.
4. The College has made arrangements for continuing the course under BCU for the year 2022-23 and 2023-24 at the newly established St. Joseph's University.
5. An assurance has been provided by the Principal that all the records pertaining to the students since inception and the current records will be handed over to St. Joseph's University for their safe custody and to provide the required documents as and when sought by the students, Bengaluru City University and Government of Karnataka.
6. An undertaking from the Principal has been obtained and enclosed to this report.

**ಸಮಿತಿಯ ಶಿಫಾರಸ್ಸು:**

The committee after satisfying with the arrangements made by the College in respect of teaching arrangement and preservation of records, unanimously recommends accepting the request of the College/Management for Voluntary Closure of St. Joseph's Evening College (Autonomous) from the academic year 2022-23.

ಸಮಿತಿಯ ವರದಿಯನ್ನು ದಿನಾಂಕ 08.02.2023ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಲಾಗಿ 2022–23ನೇ ಶೈಕ್ಷಣಿಕ ಸಾಲಿನಿಂದ ಸಂತ ಜೋಸೆಫ್ ಸ್ವಾಯತ್ತ ಸಂಜೆ ಮಹಾವಿದ್ಯಾಲಯವನ್ನು ಮುಚ್ಚುವ ಪ್ರಸ್ತಾವನೆಗೆ ಒಪ್ಪಿಗೆ ಸೂಚಿಸಿ ಸಿಂಡಿಕೇಟ್ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲು ವಿದ್ಯಾವಿದ್ಯಾವಿಷಯಕ ಪರಿಷತ್ ಸಭೆ ತೀರ್ಮಾನಿಸಿರುತ್ತಾರೆ.

ಆದುದರಿಂದ ವಿದ್ಯಾವಿಷಯಕ ಪರಿಷತ್ ಸಭೆ ಶಿಫಾರಸ್ಸು ಮಾಡಿರುವ ಸಮಿತಿಯ ವರದಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ಸಿಂಡಿಕೇಟ್ ತೀರ್ಮಾನ:**

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಂತ ಜೋಸೆಫ್ ಸ್ವಾಯತ್ತ ಸಂಜೆ ಮಹಾವಿದ್ಯಾಲಯವನ್ನು ಮುಚ್ಚುವ ಕುರಿತಂತೆ ತಜ್ಞರ ಸಮಿತಿ ನೀಡಿದ ವರದಿ ಹಾಗೂ ವಿದ್ಯಾವಿಷಯಕ ಪರಿಷತ್ ಸಭೆಯ ಶಿಫಾರಸ್ಸುಗಳಿಗೆ ಒಪ್ಪಿಗೆ ಸೂಚಿಸಿ ಮಹಾವಿದ್ಯಾಲಯದ ಸ್ವಯಂ ಮುಚ್ಚುವ ಪ್ರಸ್ತಾವನೆ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.

ಈ ಮಹಾವಿದ್ಯಾಲಯದಿಂದ ಬರಬೇಕಾದ ಶುಲ್ಕಗಳನ್ನು ಆಕರಿಸಬೇಕೆಂದು ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದರು.

---

ವಿಷಯ ಸಂಖ್ಯೆ: 11

**Sub:** Educational Collaboration and Partnership with University of Alabama Huntsville and Alamo Colleges District, Texas visit of Vice-Chancellor to the respective Universities.

***REFERENCE NOTE:***

The University has been actively involved in the dialogue and discussion with the foreign Universities, Industries and Organisations for bilateral academic collaboration and partnership. The Syndicate has been apprised of the collaborative initiatives from time to time. In furtherance of the initiatives and discussions two delegations of the following foreign Universities have visited Bengaluru City University on the dates shown against each:

| | | |
|---|---|---|
| 1. | University of Alabama, Huntsville. | 31st October 2022 & 4th Nov. 2022 |
| 2. | Alamo Colleges District, Texas. | 7th December 2022 |

The delegation of University of Alabama consisted of Dr. Letha Hughes Etzkorn, Professor Computer Science, Dr. Ranganath, Professor Emeritus and Mr. Harsha Patel International Students Counsellor and on behalf of Bengaluru City University, Vice-Chancellor, Registrar, Dean and Faculty Members were involved. Both the teams exchanged ideas and discussed over the possibilities of collaborative studies and research in the thirst areas of new age computer Science related subjects. The visiting team has also interacted with BCA and M.Sc. Computer Science students on 4th November, 2022.

Based on the inputs given by the visiting team to its parent University, Dr. Jon Hakkila, Associate Provost of International services and Dean of Graduate School, University of Alabama, Huntsville, has sent a letter dated: 15.02.2023 requesting the Vice-Chancellor to visit University of Alabama in the month of March/April 2023 for further discussion to establish a possible educational partnership between Bengaluru City University and University of Alabama

Secondly, based on the a communication received from the office of the US consulate, Chennai the 29th November 2022, a meeting of Vice-Chancellor, faculty members & officers was held with the Chancellor of Alamo Colleges District Dr. Mike Flores, Executive Director, Alejandra Bueno, Director, Ms. Usha Venkat and Antappa Badigair on 7th December, 2022 to learn more about the BCU and explore possibility of future collaboration. The meeting was held on the BCU campus with the Vice Chancellor and concerned academic faculty. The theme of discussion was to explore the opportunities for faculty and student exchange programme and a long term partnership / collaboration for teaching and research. Both the delegations have expressed positive opinion about the possible partnership. The partnership will provide an exposure to the faculty and students of BCU to the international training, experiential learning, faculty exchanges and virtual exchange using collaboration online international learning (COIL) methodology.

The Executive Director of Alamo Colleges District has sent an invitation to the Vice Chancellor to visit Alamo Colleges District for formalizing the future collaborative efforts and to sign a Letter of Intent between two institutions.

Further the British Council of India and Karnataka State Higher Education under the programme 'Furthering Higher Education Partnership: UK and Karnataka" have entered into an agreement with the Bengaluru City University and Birmingham City University in research and work in STEM and provide opportunity to strengthen Higher Education. The project 'Net Carbon Zero Hub' has been confirmed and the department of MBA is steering this project. The duration of the project is from 01.03.2023 to 31.12.2023. The proposed visit will also help in extending the areas of collaboration.

The academic collaborations will help the Bengaluru City University to strengthen academic and research, activity, faculty development programme, faculty exchange programme and provide an exposure to the faculty and students for learning on international platform which will help to enhance the confidence of students.

As per the letter of Special Secretary to Chancellor dated. 2.3.2023, a proposal seeking approval of Hon'ble Chancellor is to be sent through State Government.

The matter is placed before the Syndicate for information and approval.

ಸಿಂಡಿಕೇಟ್ ತೀರ್ಮಾನ:

**ಪ್ರಸ್ತಾವನೆ ಒಪ್ಪಿಗೆ ಸೂಚಿಸಿ, ನಿಯಮಗಳ ಪ್ರಕಾರ University of Alabama, Alamo Colleges District ಮತ್ತು Birmingham University U.K ಇವುಗಳಿಗೆ ಮಾನ್ಯ ಕುಲಪತಿಗಳು ಭೇಟಿ ನೀಡಿ ಶೈಕ್ಷಣಿಕ / ಸಂಶೋಧನಾ ಸಹಭಾಗಿತ್ವ ಕುರಿತು ಚರ್ಚಿಸಲು ಹಾಗೂ ಒಡಂಬಡಿಕೆ ಪತ್ರಗಳಿಗೆ ಸಹಿ ಹಾಕಲು ಸಿಂಡಿಕೇಟ್ ಸಭೆ ಸರ್ವಾನುಮತದ ಅನುಮೋದನೆ ನೀಡಿತು.**

---

ವಿಷಯ ಸಂಖ್ಯೆ: 12

ವಿಷಯ: 2023-24ನೇ ಸಾಲಿಗೆ ಸಂಯೋಜನೆ ನವೀಕರಣ ಹೊಸ ಕೋರ್ಸ್/ವಿಷಯ/ಭಾಷೆಗಳ ಹಾಗೂ ವಿದ್ಯಾರ್ಥಿ ಪ್ರಮಾಣ ಹೆಚ್ಚಳ ಇತ್ಯಾದಿಗಳಿಗೆ ಅರ್ಜಿ ಸಲ್ಲಿಸಲು ಸಂಯೋಜನಾ ಶುಲ್ಕ ಪಟ್ಟಿಯನ್ನು ಪರಿಷ್ಕರಿಸಿ ಅಧಿಸೂಚನೆ ಹೊರಡಿಸುವ ಬಗ್ಗೆ.

*ಪರಮಾರ್ಶಕ ಟಿಪ್ಪಣಿ:*

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ 13 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಬರುವ ಒಟ್ಟು 231 ಕಾಲೇಜುಗಳಿಗೆ 2023-24ನೇ ಶೈಕ್ಷಣಿಕ ಸಾಲಿನ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಹಾಗೂ ಬಿ.ಎಡ್. ಬಿ.ಪಿಎಡ್. ಎಂ.ಎ.ಡ್. ಎಂ.ಪಿಎಡ್. ಕಾಲೇಜುಗಳ ಸಂಯೋಜನೆ ನವೀಕರಣ ಹೊಸ ಕಾಲೇಜುಗಳ ಪ್ರಾರಂಭ/ ವಿಷಯ/ ಭಾಷೆ ಹಾಗೂ ವಿದ್ಯಾರ್ಥಿ ಪ್ರಮಾಣ ವಿಸ್ತರಣೆ ಇತ್ಯಾದಿಗಳಿಗೆ

ಅಧಿಸೂಚನೆಯನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಕಾಯ್ದೆ –2000 ಪ್ರಕರಣ 59,62 ಮತ್ತು 64ರ ಪ್ರಕಾರ ಹೊರಡಿಸಬೇಕಾಗಿದೆ.

2023–24ನೇ ಶೈಕ್ಷಣಿಕ ಸಾಲಿಗೆ ಹೊಸ ಕಾಲೇಜುಗಳ ಪ್ರಾರಂಭ ಮಾಡುವ ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಲು ಸಂಯೋಜನಾ ಶುಲ್ಕ ಪಟ್ಟಿಯನ್ನು ಸಿದ್ಧಪಡಿಸಿಕೊಳ್ಳಬೇಕಾಗಿರುತ್ತದೆ. ಸಂಯೋಜನಾ ಶುಲ್ಕ ಹಿಂದಿನ 2022–23ನೇ ಸಾಲಿನ ಶುಲ್ಕ ಪಟ್ಟಿಗೆ (ಅನುಬಂಧ.ಅ) ಶೇಕಡ.10% ಹೆಚ್ಚುವರಿಯಾಗಿ ಪರಿಷ್ಕರಿಸಲು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

ಸಿಂಡಿಕೇಟ್ ತೀರ್ಮಾನ:

**2023–24ನೇ ಸಾಲಿಗೆ ಸಂಯೋಜನೆ ನವೀಕರಣ ಹೊಸ ಕೋರ್ಸು/ವಿಷಯ/ಭಾಷೆಗಳ ಹಾಗೂ ವಿದ್ಯಾರ್ಥಿ ಪ್ರಮಾಣ ಹೆಚ್ಚಳ ಇತ್ಯಾದಿಗಳಿಗೆ ಅರ್ಜಿ ಸಲ್ಲಿಸಲು ಸಂಯೋಜನಾ ಶುಲ್ಕವನ್ನು ಶೇಕಡಾ 10% ರಷ್ಟು ಹೆಚ್ಚಿಸಿ ಪರಿಷ್ಕರಿಸುವ ಪ್ರಸ್ತಾವನೆಗೆ ಸಿಂಡಿಕೇಟ್ ಸಭೆ ಅನುಮೋದನೆ ನೀಡಿತು. ಬೇಡಿಕೆ ಇಲ್ಲದೆ ವಿಜ್ಞಾನ / ಕಲಾ ನಿಕಾಯದ ವ್ಯಾಸಂಗಗಳ ಶುಲ್ಕ ಕಡಿಮೆಗೊಳಿಸಲು ಕುರಿತು ಆಯಾ ಪ್ರಕರಣಗಳನ್ನು ಆಧರಿಸಿ ತೀರ್ಮಾನ ಕೈಗೊಳ್ಳಲು ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.**

ಕುಲಸಚಿವರು (ಮೌಲ್ಯಮಾಪನ) ರವರಿಂದ ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

ಸಹಿ/–
ಕುಲಸಚಿವರು
ಸದಸ್ಯಕಾರ್ಯದರ್ಶಿಗಳು

ಸಹಿ/–
ಕುಲಪತಿಗಳು
ಸಭಾಧ್ಯಕ್ಷರು

ಕುಲಸಚಿವರು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಬೆಂಗಳೂರು